Metrolife lifestyle

# A tribute to Siddayya Puranik



ddayya Puranik along with children, back in 1958.

A book and CD release are part of an evening to commemorate the life and times of the Kannada poet

The 100th birth anniversary of Kannada poet Siddayya Puranik is being coming up on January 5 in Bengaluru.

Prasanna Puranik, the poet;s son, spoke to Metrolife about the event. "Having been an IAS officer, my father took to writing during his free time. He was always spotted with a book in his hands," he says.

The event will feature the launch of a book called Sangama, a selection of Siddayya Puranik's poems.

An incident in Siddayya Puranik's life inspired him to start writing literature for children, recalls Prasanna.

"My father was asked to pen two poems for a school textbook. Under pressure, he did, and that is how it all started," he adds.

Besides being a poet, Siddayya Puranik was also a critic, scholar and orator in Kannada, English, Sanskrit, Urdu, and Hindi, says Lata Puranik, his daughter-in-law.

Prasanna plans to gift the book Sangama to about a hundred rural schools, along with CDs of his songs. "We want to preserve these precious works and save them for the next generation. We are doing our bit," she says.

'Samagra Kavya', 'Samagra Vachana', 'Samagra Natakagalu', and 'Samagra Makkala Sahitya' are some of his works collected and published by Prasanna Puranik.

**Rakshitha MN**



Siddayya Puranik

## 'Modalu Maanavanagu'

Siddayya Puranik published eight volumes of poems, seven biographies, four plays, eight children's books, two volumes of short stories, one historical novel, three volumes of vachanas and 13 edited works. 'Sharana Charitamruta', 'Vachanodyana', 'Maralusidanna Kante' are some of his prominent works. 'Enadaru aagu modalu maanavanagu' is his most famous poem.

## CD and book

A CD and a book with 15 Siddayya Puranik poems and vachanas is being launched on Saturday. The CD also has karaoke tracks to help people sing along to the tunes. The music is scored by S Somasundaram, founder and president of Gaanasudha, academy for sugama sangeeta.

**Date:** January 5
**Time:** 5.30 pm onwards
**Venue:** Shri Krishna Raja Parishan Mandira, Kannada Sahitya Parishat, Pampa Mahakavi Road,-Chamrajpet.
Entry is free. For details, contact 9845127201.

ಪ್ರಜಾವಾಣಿ
ಮೆಟ್ರೊ • ಶನಿವಾರ • ನವೆಂಬರ್ 24, 2018

## ನಗರದಲ್ಲಿ ಇಂದು

**ಡಾ.ಸಿದ್ಧಯ್ಯ ಪುರಾಣಿಕರ ಗೌರವಾರ್ಥ ಹೊರತರಲಾಗಿರುವ ವಿಶೇಷ ಅಂಚೆ ಲಕೋಟೆ ಬಿಡುಗಡೆ:** ಬರಹಗಾರ ಅ.ರಾ.ಮಿತ್ರ, ಅತಿಥಿ- ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಚಾರ್ಲ್ಸ್ ಲೋಬೊ. ಆಯೋಜನೆ, ಸ್ಥಳ-ಕರ್ನಾಟಕ ಪೋಸ್ಟಲ್ ಸರ್ಕಲ್, ಮೇಘದೂತ ಸಭಾಂಗಣ, ಪ್ರಧಾನ ಅಂಚೆ ಕಚೇರಿ, ಅಂಬೇಡ್ಕರ್ ವೀದಿ. ಬೆಳಿಗ್ಗೆ 11

DECCAN HERALD 3B
Saturday, November 24, 2018

# Metro

## In city today

**Karnataka Postal Circle:** Release of a special cover of Dr. Siddayya Puranik, Meghdoot auditorium, 5th floor, Bengaluru GPO, 11 am

ಪ್ರಜಾವಾಣಿ ಬುಧವಾರ • ನವೆಂಬರ್ 28, 2018
ಬೆಂಗಳೂರು ನಗರ 3

## ಚಿತ್ರಾವಳಿ



ಿದ್ಧಯ್ಯ ಪುರಾಣಿಕ ಅವರ ಜನ್ಮ ಶತಮಾನೋತ್ಸವದ ಅಂಗವಾಗಿ ಅಂಚೆ ಇಲಾಖೆಯಿಂದ ಹೊರತರಲಾದ ವಿಶೇಷ ಅಂಚೆ ಚೀಟಿಯನ್ನು ಹಿರಿಯ ಸಾಹಿತಿ ಅ.ರಾ.ಮಿತ್ರ ಬಿಡುಗಡೆ ಮಾಡಿದರು. ಲತಾ ಹಾಗೂ ಪ್ರಸನ್ನ ಕುಮಾರ್ ಪುರಾಣಿಕ (ಪುರಾಣಿಕ್ ಅವರ ಸೊಸೆ ಮತ್ತು ಮಗ), ಮುಖ್ಯ ಪ್ರಧಾನ ಅಂಚೆ ವ್ಯವಸ್ಥಾಪಕ ಚಾರ್ಲ್ಸ್ ಲೋಬೊ ಚಿತ್ರದಲ್ಲಿದ್ದಾರೆ – ಪ್ರಜಾವಾಣಿ ಚಿತ್ರ

ಸಂಯುಕ್ತ ಕರ್ನಾಟಕ
ಮಂಗಳವಾರ, 27, ನವೆಂಬರ್, 2018,



ಪ್ರಧಾನ ಅಂಚೆ ಕಚೇರಿಯಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಕವಿ ಡಾ. ಸಿದ್ದಯ್ಯ ಪುರಾಣಿಕ ಅವರ ಕುರಿತ ಅಂಚೆ ಲಕೋಟೆಯನ್ನು ಅಂಚೆ ಇಲಾಖೆಯ ಮುಖ್ಯ ಅಧೀಕ್ಷಕ ಚಾರ್ಲ್ಸ್ ಲೋಬೋ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಲೇಖಕ ಅ.ರಆ. ಮಿತ್ರ, ಪುರಾಣಿಕರ ಪುತ್ರ ಪ್ರಸನ್ನಕುಮಾರ್ ಮತ್ತಿತರರಿದ್ದರು.

ವಿಜಯ ಕರ್ನಾಟಕ



# ಸುಗಮ ಸಂಗೀತದಲ್ಲಿ ಭಾವಾರ್ಥಕ್ಕೆ ಒತ್ತು

■ ವಿಕ ಸುದ್ದಿಲೋಕ ಬೆಂಗಳೂರು

**ಕಾವ್ಯ ಮತ್ತು ವಚನದ ಭಾವಾರ್ಥಕ್ಕೆ ಒತ್ತು ನೀಡುವುದು ಸುಗಮ ಸಂಗೀತದ ವೈಶಿಷ್ಟ್ಯ ಎಂದು ಹಿರಿಯ ಸಾಹಿತಿ ನಾಡೋಜ ಪ್ರೊ. ಎಂ.ಎಚ್. ಕೃಷ್ಣಯ್ಯ ಅಭಿಪ್ರಾಯಪಟ್ಟರು.**

## 'ಸಂಗಮ' ಧ್ವನಿಸಾಂದ್ರಿಕೆ ಬಿಡುಗಡೆ



ಕಸಾಪದ ಶ್ರೀ ಕೃಷ್ಣರಾಜ ಪರಿಷನ್ಮಂದಿರದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ 'ಸಂಗಮ' ಧ್ವನಿ ಸಾಂದ್ರಿಕೆ ಲೋಕಾರ್ಪಣೆ ಕಾರ್ಯಕ್ರಮ ನಡೆಯಿತು.

ಗಾನಸುಧಾ ಸುಗಮ ಸಂಗೀತ ಅಕಾಡೆಮಿಯು ಕಸಾಪದ ಶ್ರೀ ಕೃಷ್ಣರಾಜ ಪರಿಷನ್ಮಂದಿರದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಡಾ. ಸಿದ್ದಯ್ಯ ಪುರಾಣಿಕ (ಕಾವ್ಯಾನಂದ)ರ ಜನ್ಮ ಶತಮಾನೋತ್ಸವದ ನೆನಪಿಗಾಗಿ ಹೊರತಂದಿರುವ ಅವರ ಕವನ ಮತ್ತು ವಚನಗಳ ಗೀತಗುಚ್ಛ 'ಸಂಗಮ' ಧ್ವನಿ ಸಾಂದ್ರಿಕೆಯನ್ನು ಲೋಕಾರ್ಪಣೆ ಮಾಡಿ ಶನಿವಾರ ಅವರು ಮಾತನಾಡಿದರು.

''ಸಿದ್ದಯ್ಯ ಪುರಾಣಿಕರ ವಚನಗಳನ್ನು ಅರಿತು ಹಾಡಿದರೆ ಅದರಿಂದ ವಿಶೇಷ ಅನುಭವ ದೊರೆಯುತ್ತದೆ. ಕವನ ಮತ್ತು ವಚನಗಳ ಸಂಗಮ ಒಂದೇ ಧ್ವನಿಸಾಂದ್ರಿಕೆಯಲ್ಲಿ ತಂದಿರುವುದು ಶ್ಲಾಘನೀಯವಾದುದು. ಯಾವ ಕವನಕ್ಕೆ ಯಾವ ಧ್ವನಿ ಬೇಕು ಎಂಬುದರ ಸೂಕ್ಷ್ಮತೆಯೊಂದಿಗೆ ಧ್ವನಿ ಸಾಂದ್ರಿಕೆಯನ್ನು ಹೊರತರಲಾಗಿದೆ. ಗಾಯನ ಒಂದು ಪರಂಪರೆಯಾದರೆ, ವಚನ ಗಾಯನ ಮತ್ತೊಂದು ಪರಂಪರೆಯಾಗಿದೆ. ಮಕ್ಕಳ ಶಾರೀರವನ್ನು ಗಮನದಲ್ಲಿಟ್ಟುಕೊಂಡು ಅವರಿಗಾಗಿ ಈ ಧ್ವನಿಸುರುಳಿಯನ್ನು ರೂಪಿಸಲಾಗಿದೆ,'' ಎಂದರು.

ಸಂಗಮ ಗೀತ ಗುಚ್ಛದ ಸಂಗೀತ ನಿರ್ದೇಶಕ ಎಸ್. ಸೋಮಸುಂದರಂ ಮಾತನಾಡಿ, ''ಸಿದ್ದಯ್ಯ ಪುರಾಣಿಕರ ಕಾವ್ಯದಲ್ಲಿ ಸಾಕಷ್ಟು ಹೊಸ ಹೊಸ ಪದಗಳಿವೆ. ಇವರ ಕಾವ್ಯದ ಕುರಿತಾದ 15 ಭಾವಗೀತೆಗಳು ಮತ್ತು 15 ವಚನಗಳನ್ನು ಆರಿಸಿಕೊಂಡು ಧ್ವನಿ ಸುರುಳಿ ಸಿದ್ಧಪಡಿಸಲಾಗಿದೆ'' ಎಂದರು.

ಕಾರ್ಯಕ್ರಮದಲ್ಲಿ ಕೆ.ಎನ್. ಶಾಂತಕುಮಾರ್ ಮತ್ತು ಪುರಾಣಿಕರ ಕುಟುಂಬ ವರ್ಗದವರು ಉಪಸ್ಥಿತರಿದ್ದರು. ಇದೇ ವೇಳೆ ನಾನಾ ಗಾಯಕರು 'ಸಂಗಮ' ಧ್ವನಿಸಾಂದ್ರಿಕೆಯ ಗೀತೆಗಳನ್ನು ಹಾಡಿದರು.

ಮೆಟ್ರೊ • ಶನಿವಾರ • ಜನವರಿ 5, 2019




ಡಾ.ಸಿದ್ದಯ್ಯ ಪುರಾಣಿಕ (ಕಾವ್ಯಾನಂದ)ರ ಜನ್ಮ ಶತಮಾನೋತ್ಸವದ ನೆನಪಿನಲ್ಲಿ ಅವರ ಕವನ ಮತ್ತು ವಚನಗಳ ಗೀತಗುಚ್ಛ 'ಸಂಗಮ' ಧ್ವನಿ ಸಾಂದ್ರಿಕೆ ಬಿಡುಗಡೆ ಸಮಾರಂಭ: ಮುಖ್ಯ ಅತಿಥಿಗಳು-ಎಂ.ಎಚ್. ಕೃಷ್ಣಯ್ಯ, ವಿಶೇಷ ಅತಿಥಿಗಳು- ದಿ ಪ್ರಿಂಟರ್ಸ್ ಪ್ರೈ.ಲಿಮಿಟೆಡ್ ನಿರ್ದೇಶಕ ಕೆ.ಎನ್.ಶಾಂತ ಕುಮಾರ್, ಗೀತ ಗುಚ್ಛದ ಸಂಗೀತ ನಿರ್ದೇಶಕ ಎಸ್.ಸೋಮಸುಂದರಂ, ಗಾಯನ-ಗಾನಸುಧಾ ಸುಗಮ ಸಂಗೀತ ಅಕಾಡೆಮಿ ಗಾಯಕರು, ಸ್ಥಳ-ಕೃಷ್ಣರಾಜ ಪರಿಷನ್ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5.30

---

04 ಬೆಂ

ಸೆಣ್ ಸುದ್ದಿ

## 5ಕ್ಕೆ ಸಿದ್ಧಯ್ಯ ಪುರಾಣಿ... 'ಸಂಗಮ' ಸಿಡಿ ಬಿಡು...

---

ನಂ. 1 ಕನ್ನಡ ದಿನಪತ್ರಿಕೆ

# ವಿಜಯವಾಣಿ

VIJAYAVANI » BENGALURU


ಶನಿವಾರ 5 ಜನವರಿ 2019

5 JANUARY 2019

C 2

## ಬೆಂಗಳೂರು ಸಿಟಿ ಎಕ್ಸ್‌ಪ್ರೆಸ್

## ನಮ್ಮೂರಲ್ಲಿಂದು



» ಧ್ವನಿಸಾಂದ್ರಿಕೆ ಬಿಡುಗಡೆ: ಡಾ.ಸಿದ್ದಯ್ಯ ಪುರಾಣಿಕ (ಕಾವ್ಯಾನಂದ) ಜನ್ಮಶತಮಾನೋತ್ಸವ. ಕಾವ್ಯಾನಂದರ ಕವಿತೆ- ವಚನಗಳ ಗಾಯನ 'ಸಂಗಮ' ಧ್ವನಿಸಾಂದ್ರಿಕೆ (ಸಂಗೀತ ನಿರ್ದೇಶನ: ಎಸ್. ಸೋಮಸುಂದರಂ) ಬಿಡುಗಡೆ. ಮುಖ್ಯ ಅತಿಥಿ: ಹಿರಿಯ ಸಾಹಿತಿ ಪ್ರೊ.ಎಂ.ಎಚ್. ಕೃಷ್ಣಯ್ಯ. ವಿಶೇಷ ಅತಿಥಿ: ದಿ ಪ್ರಿಂಟರ್ಸ್ (ಮೈಸೂರು) ಪ್ರೈ.ಲಿ. ನಿರ್ದೇಶಕ ಕೆ.ಎನ್. ಶಾಂತಕುಮಾರ್. ಗಾಯನ: ಗಾನಸುಧಾ ಸುಗಮ ಸಂಗೀತ ಅಕಾಡೆಮಿ ಕಲಾವಿದರಿಂದ.

---

ಸಂಯುಕ್ತ ಕರ್ನಾಟಕ 5-1-2019

## ಇಂದಿನ ಕಾರ್ಯಕ್ರಮ

5-1-2019 ಶನಿವಾರ

ಚಾಮರಾಜಪೇಟೆ, ಕನ್ನಡ ಸಾಹಿತ್ಯ ಪರಿಷತ್ತು, ಶ್ರೀಕೃಷ್ಣರಾಜ ಪರಿಷನ್ಮಂದಿರ, ಡಾ.ಸಿದ್ದಯ್ಯ ಪುರಾಣಿಕರ ಜನ್ಮ ಶತಮಾನೋತ್ಸವ ನೆನಪಿನಲ್ಲಿ ಅವರ ಕವನ ಮತ್ತು ವಚನಗಳ ಗೀತಗುಚ್ಛ 'ಸಂಗಮ' ಧ್ವನಿ ಸಾಂದ್ರಿಕೆ ಬಿಡುಗಡೆ ಸಮಾರಂಭ. ಮುಖ್ಯಅತಿಥಿ: ಸಾಹಿತಿ ಪ್ರೊ.ಎಂ.ಎಚ್. ಕೃಷ್ಣಯ್ಯ. ಅತಿಥಿ: ದಿ ಪ್ರಿಂಟರ್ಸ್ ಪ್ರೈ.ಲಿ. ನಿರ್ದೇಶಕ. ಕೆ.ಎನ್.ಶಾಂತಕುಮಾರ್. ಕರ್ನಾಟಕ ಕಲಾಶ್ರೀ ಎಸ್.ಸೋಮಸುಂದರಂ. ಸಂಜೆ 5.30



---

ವಿಜಯ ಕರ್ನಾಟಕ

|| ನಮ್ಮ ಬೆಂಗಳೂರು ಶನಿವಾರ, 5 ಜನವರಿ 2019

## ಎಲ್ಲಿ-ಏನು?

ಶನಿವಾರ

**ಸಂಗಮ ಬಿಡುಗಡೆ:** ಡಾ. ಸಿದ್ದಯ್ಯ ಪುರಾಣಿಕರ ಜನ್ಮ ಶತಮಾನೋತ್ಸವದ ನೆನಪಿನಲ್ಲಿ ಅವರ ಕವನ ಮತ್ತು ವಚನಗಳ ಗೀತಗುಚ್ಛ 'ಸಂಗಮ' ಧ್ವನಿ ಸಾಂದ್ರಿಕೆ ಬಿಡುಗಡೆ. ಅತಿಥಿಗಳು: ಸಾಹಿತಿ ನಾಡೋಜ ಪ್ರೊ. ಎಂ.ಎಚ್. ಕೃಷ್ಣಯ್ಯ, ಸಂಗಮದ ಸಂಗೀತ ನಿರ್ದೇಶಕ ಎಸ್. ಸೋಮಸುಂದರಂ. ಸ್ಥಳ: ಶ್ರೀ ಕೃಷ್ಣರಾಜ ಪರಿಷನ್ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ. 5.30

ಪ್ರಜಾವಾಣಿ.


# ಬೆಂಗಳೂರು ನಗರ

2 ಭಾನುವಾರ • ಜನವರಿ 6, 2019 ಸೂರ್ಯೋ


# ‘ಚಿಣ್ಣರಿಗಾಗಿ ಸಾಹಿತ್ಯ ರೂಪಿಸಿದ ಪುರಾಣಿಕರು’

## ಕಾವ್ಯಾನಂದರ ಕವನ ಮತ್ತು ವಚನಗುಚ್ಛದ ‘ಸಂಗಮ’ ಧ್ವನಿ ಸಾಂದ್ರಿಕೆ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಿದ್ಧಯ್ಯ ಪುರಾಣಿಕರದು ವಿಶಿಷ್ಟ ಸಾಧನೆ. ವೈವಿಧ್ಯಮಯ ಸಾಹಿತ್ಯದಿಂದಲೇ ಹೆಚ್ಚು ಪ್ರಸಿದ್ಧಿ ಪಡೆದು, ನವೋದಯ ಸಂದರ್ಭದಲ್ಲಿ ಮಕ್ಕಳ ಸಾಹಿತ್ಯ ರಚಿಸಿ, ಚಿಣ್ಣರು ಹಾಡಿಕೊಳ್ಳಲು ಅನೇಕ ಗೀತೆಗಳನ್ನು ಕೊಟ್ಟರು’ ಎಂದು ವಿದ್ವಾಂಸ ಪ್ರೊ.ಎಂ.ಎಚ್.ಕೃಷ್ಣಯ್ಯ ನುಡಿದರು.

ಪುರಾಣಿಕ ಕುಟುಂಬದಿಂದ ಆಯೋಜಿಸಲಾಗಿದ್ದ ಸಿದ್ಧಯ್ಯ ಪುರಾಣಿಕ (ಕಾವ್ಯಾನಂದ) ಜನ್ಮದಿನೋತ್ಸವದ ನೆನಪಿನಲ್ಲಿ ಅವರ ಕವನ ಮತ್ತು ವಚನಗುಚ್ಛದ ‘ಸಂಗಮ’ ಧ್ವನಿ ಸಾಂದ್ರಿಕೆಯನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

‘ಸಮಾಜದ ನ್ಯಾಯ-ಅನ್ಯಾಯಗಳ ಕುರಿತು ತಮ್ಮ ಸಾಮಾಜಿಕ ಕಳಕಳಿಯನ್ನೇ ಸಾಹಿತ್ಯದಲ್ಲಿ ಉಲ್ಲೇಖಿಸಿದ್ದಾರೆ. ಜನರಾಡುವ ಭಾಷೆಯನ್ನೇ ಬರಹಕ್ಕಿಳಿಸಿದ ಸಿದ್ಧಯ್ಯ ಅವರ ಸಾಹಿತ್ಯಕ್ಕೆ, ಎಲ್ಲರೂ ಗುನುಗುವ ರೀತಿ ಸೋಮಸುಂದರಂ ಅವರು ರಾಗ ಸಂಯೋಜಿಸಿದ್ದಾರೆ’ ಎಂದು ಹೇಳಿದರು.

ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ನಿರ್ದೇಶಕ ಕೆ.ಎನ್.ಶಾಂತಕುಮಾರ್, ‘ಪುರಾಣಿಕ ಅವರು ವಚನ, ಕಾವ್ಯಗಳ ಮೂಲಕ ಸಾಹಿತ್ಯಕ್ಕೆ ದೊಡ್ಡ ಕೊಡುಗೆಯನ್ನು ನೀಡಿದ್ದರು. ಅಲ್ಲದೆ, ದಕ್ಷ ಅಧಿಕಾರಿಯಾಗಿ ಪ್ರಾಮಾಣಿಕ ಸೇವೆ ಸಲ್ಲಿಸಿದ್ದರು’ ಎಂದು ಸ್ಮರಿಸಿದರು.

ಪುರಾಣಿಕ ಅವರ ಪುತ್ರ ಪ್ರಸನ್ನಕುಮಾರ, ‘ನಮ್ಮ ತಂದೆಯ ಸಾಹಿತ್ಯವನ್ನು ಪಸರಿಸುವುದಕ್ಕಾಗಿ ಈ ಧ್ವನಿ ಸಾಂದ್ರಿಕೆಯನ್ನು ರಾಜ್ಯದ ಸರ್ಕಾರಿ ಶಾಲೆಗಳ ಮಕ್ಕಳಿಗೆ ಉಚಿತವಾಗಿ ವಿತರಿಸುತ್ತೇವೆ’ ಎಂದು ಹೇಳಿದರು.

‘ಏಕೆ ಕುಣಿವೆ ತೂಕ ತಪ್ಪಿ ಸಾಕು ಕಾಲಭೈರವ’, ‘ನೀನು ವಿಶ್ವತೋಮುಖ’, ‘ಹೊತ್ತಿತೋ ಹೊತ್ತಿತು ಕನ್ನಡದ ದೀಪ’, ‘ನೀನು ಹರಿ ನೀನು ಹರ’, ‘ಹೂವಿನ ಗಂಧ’....ಧ್ವನಿ ಸಾಂದ್ರಿಕೆಯಲ್ಲಿನ ಹಾಡುಗಳನ್ನು ಗಾನಸುಧಾ ಸಂಗಮ ಸಂಗೀತ ಅಕಾಡೆಮಿಯ ಗಾಯಕರು ಹಾಡಿದರು.




ವಿದ್ವಾಂಸ ಪ್ರೊ.ಎಂ.ಎಚ್. ಕೃಷ್ಣಯ್ಯ ಅವರು ‘ಸಂಗಮ’ ಧ್ವನಿ ಸಾಂದ್ರಿಕೆ ಬಿಡುಗಡೆ ಮಾಡಿ ಕೆ.ಎನ್. ಶಾಂತಕುಮಾರ್ ಅವರಿಗೆ ಹಸ್ತಾಂತರಿಸಿದರು. (ಎಡದಿಂದ) ಡಾ.ಸಿದ್ಧಯ್ಯ ಪುರಾಣಿಕ ಅವರ ಮಗಳು ವಿಜಯಾ ನಂದೀಶ್ವರ್, ಎಸ್. ಸೋಮಸುಂದರಂ, ಪುರಾಣಿಕ ಅವರ ಮಗ ಪ್ರಸನ್ನಕುಮಾರ್ ಇದ್ದರು

ಸಂಯುಕ್ತ ಕರ್ನಾಟಕ

ಸೋಮವಾರ, 7, ಜನವರಿ, 2019




ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ. ಸಿದ್ದಯ್ಯ ಪುರಾಣಿಕರ ಆಯ್ದ ಕವಿತೆಗಳ 'ಸಂಗಮ' ಧ್ವನಿಸುರುಳಿಯನ್ನು ಬಿಡುಗಡೆ ಮಾಡಲಾಯಿತು. ಸಾಹಿತಿ ಪ್ರೊ. ಎಂ.ಎಚ್. ಕೃಷ್ಣಯ್ಯ, ಸಂಗೀತ ನಿರ್ದೇಶಕ ಸೋಮಸುಂದರಂ, ಪತ್ರಕರ್ತ ಶಾಂತಕುಮಾರ್ ಮತ್ತಿತರರಿದ್ದರು.

# ಕನ್ನಡ ಸಾಹಿತ್ಯಕ್ಕಿರಲಿ ತಂತ್ರಜ್ಞಾನದ ಸ್ಪರ್ಶ

ಸಂ.ಕ.ಸಮಾಚಾರ ಬೆಂಗಳೂರು

ಪ್ರಸ್ತುತ ಕನ್ನಡ ಸಾಹಿತ್ಯಕ್ಕೆ ತಂತ್ರಜ್ಞಾನದ ಸ್ಪರ್ಶ ಅತ್ಯವಶ್ಯವಿದೆ ಎಂದು ಹಿರಿಯ ಸಾಹಿತಿ ಪ್ರೊ. ಎಂ.ಎಚ್. ಕೃಷ್ಣಯ್ಯ ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ. ಸಿದ್ದಯ್ಯ ಪುರಾಣಿಕರ ಆಯ್ದ ಕವನಗಳ 'ಸಂಗಮ' ಧ್ವನಿಸುರುಳಿ ಬಿಡುಗಡೆ ಮಾಡಿ ಮಾತನಾಡಿ, ಕಾಲ ಬದಲಾದಂತೆ ಸಾಹಿತ್ಯಕ್ಕೂ ತಂತ್ರಜ್ಞಾನದ ನವೀನ ರೂಪ ನೀಡುವ ಅಗತ್ಯವಿದೆ. ಸಿದ್ದಯ್ಯ ಪುರಾಣಿಕರ ಕವನ, ವಚನಗಳಲ್ಲಿ ಸರಳ ಭಾಷೆಯ ಬಳಕೆಯಿದೆ. ಪುರಾಣಿಕರ ಜೀವನಾದರ್ಶಗಳ ಕಾಣ್ಕೆ ಅವರ ಸಾಹಿತ್ಯದಲ್ಲಿ ಮಡುಗಟ್ಟಿದೆ ಎಂದರು.

ಸಂಗೀತ ನಿರ್ದೇಶಕ ಎಸ್. ಸೋಮಸುಂದರಂ ಮಾತನಾಡಿ, ವಿದ್ವತ್ತು, ತಾತ್ವಿಕತೆಯಿಂದ ಕೂಡಿದ ಸಾಹಿತ್ಯ ರಚಿಸಿದ ಪುರಾಣಿಕರು, ತಮ್ಮ ಕವಿತೆಗಳಲ್ಲಿ ಕನ್ನಡದ ಹೊಸ ಹೊಸ ಶಬ್ದಗಳ ಪ್ರಯೋಗ ಮಾಡಿರುವುದರಿಂದ ಅವರ ಸಾಹಿತ್ಯ ವೈಶಿಷ್ಟ್ಯತೆಯಿಂದ ಕೂಡಿದೆ ಎಂದರು.

ಪತ್ರಕರ್ತ ಶಾಂತಕುಮಾರ್ ಕೆ.ಎನ್ ಮಾತನಾಡಿ, ಜನಪರ ಅಧಿಕಾರಿಯಾಗಿದ್ದುಕೊಂಡು ಸಾಹಿತ್ಯದಲ್ಲಿ ಬಹುದೊಡ್ಡ ಸಾಧನೆ ಮಾಡಿದ ಪುರಾಣಿಕರು, ವಚನ ಸಾಹಿತ್ಯದ ಗಂಭೀರ ವಿದ್ಯಾರ್ಥಿಯಾಗಿದ್ದರು. ಮಕ್ಕಳ ಮತ್ತು ವಚನ ಸಾಹಿತ್ಯದಲ್ಲಿ ವಿಶೇಷ ಸಾಹಿತ್ಯ ಕೃಷಿ ಮಾಡಿದವರೆಂದು ಸ್ಮರಿಸಿದರು. ಸಿದ್ದಯ್ಯನವರು, ಸಮಕಾಲೀನ ವಿಷಯಗಳನ್ನು ವಚನ ರೂಪದಲ್ಲಿ ರಚಿಸಿದವರು. ಅವರ ಸಾಹಿತ್ಯ ಸಂಗೀತಕ್ಕೆ ಒಗ್ಗುವಂತಹ ಗತ್ತಿನಲ್ಲಿದೆ ಎಂದು ಬಣ್ಣಿಸಿದ ಅವರು, ಸಾಮಾಜಿಕ, ಆಧ್ಯಾತ್ಮಿಕ ಚಿಂತನೆಯೇ ಪುರಾಣಿಕರ ಸಾಹಿತ್ಯವಾಗಿದೆ ಎಂದರು. ಇದೇ ಸಂದರ್ಭದಲ್ಲಿ ಸಿದ್ದಯ್ಯ ಪುರಾಣಿಕರ ಆಯ್ದ ಕವಿತೆಗಳ 'ಸಂಗಮ' ಎಂಬ ಧ್ವನಿಸುರುಳಿ ಬಿಡುಗಡೆ ಮಾಡಲಾಯಿತು. ಅನಿಲ ಗೋಕಾಕ್, ಪ್ರಸನ್ನ ಕುಮಾರ ಪುರಾಣಿಕ ಹಾಗೂ ಕುಟುಂಬ ಸದಸ್ಯರು ಉಪಸ್ಥಿತರಿದ್ದರು.

ಬಹುಜನ ಕನ್ನಡಿಗರು

BAHUJANA KANNADIGARU

PROGRESSIVE KANNADA FORTNIGHTLY

Rs. 7/- January 16, 2019 Volume : 21 Issue : 20

# 'ಕಾವ್ಯಾನಂದ'ರ ಕವನ -ವಚನಗಚ್ಛದ 'ಸಂಗಮ' ಧ್ವನಿಸಾಂದ್ರಿಕೆ ಬಿಡುಗಡೆ

'ಕಾವ್ಯಾನಂದ' ಕಾವ್ಯ ನಾಮದಲ್ಲಿ ಸಾಹಿತ್ಯ ಕೃಷಿ ಮಾಡಿದ್ದ, ಐ.ಎ.ಎಸ್.ದಕ್ಷ ಅಧಿಕಾರಿಯಾಗಿಯೂ ಹೆಸರು ಮಾಡಿದ್ದ ಡಾ.ಸಿದ್ದಯ್ಯ ಪುರಾಣಿಕರ ಕವನ ಮತ್ತು ವಚನ ಗುಚ್ಛದ 'ಸಂಗಮ' ಧ್ವನಿ ಸಾಂದ್ರಿಕೆಯನ್ನು, ಜನವರಿ ೫ರಂದು ಬೆಂಗಳೂರಿನಲ್ಲಿ ಆಯೋಜಿಸಿದ್ದ ಸಿದ್ದಯ್ಯ ಪುರಾಣಿಕ ಜನ್ಮ ದಿನೋತ್ಸವ ನೆನಪಿನ ಕಾರ್ಯಕ್ರಮದಲ್ಲಿ ಹಿರಿಯ ವಿದ್ವಾಂಸ ಪ್ರೊ. ಎಂ.ಎಚ್.ಕೃಷ್ಣಯ್ಯ ಬಿಡುಗಡೆ ಗೊಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು ನವೋದಯ ಸಾಹಿತ್ಯ ಸಂದರ್ಭದಲ್ಲಿ ಮಕ್ಕಳಿಗಾಗಿ ಸಾಹಿತ್ಯ ರಚಿಸಿ, ಚಿಣ್ಣರು ಹಾಡಿಕೊಳ್ಳಲು ಅನೇಕ ಗೀತೆಗಳನ್ನು ಕೊಟ್ಟ ಸಿದ್ದಯ್ಯ ಪುರಾಣಿಕರು ವೈವಿಧ್ಯಮಯ ಸಾಹಿತ್ಯ, ವಿಶಿಷ್ಟ ಸಾಧನೆ ಮೂಲಕ ಹೆಚ್ಚು ಪ್ರಸಿದ್ಧರಾದವರು. ಜನರಾಡುವ ಭಾಷೆಯನ್ನೇ ಬರಹಕ್ಕಿಳಿಸಿರುವ ಅವರು ಸಾಹಿತ್ಯಕ್ಕೆ ಎಲ್ಲರೂ ಗುನುಗುವ ರೀತಿಯಲ್ಲಿ



ಪ್ರೊ. ಎಂ.ಎಚ್.ಕೃಷ್ಣಯ್ಯ ಅವರು 'ಸಂಗಮ'ಧ್ವನಿ ಸಾಂದ್ರಿಕೆ ಬಿಡುಗಡೆ ಮಾಡಿ ಕೆ.ಎನ್.ಶಾಂತಕುಮಾರ್ ಅವರಿಗೆ ಹಸ್ತಾಂತರಿಸಿದ ಚಿತ್ರ. ವಿಜಯಾ ನಂದೀಶ್ವರ್, ಎಸ್.ಸೋಮಸುಂದರಂ, ಪ್ರಸನ್ನಕುಮಾರ್ ಇದ್ದಾರೆ.

ಸೋಮಸುಂದರಂ ಅವರು ರಾಗ ಸಂಯೋಜನೆ ಮಾಡಿದ್ದಾರೆ ಎಂದರು.

ದಿ. ಪ್ರಿಂಟರ್ಸ್ (ಮೈಸೂರು) ಪ್ರೈ ಲಿ.ನ ನಿರ್ದೇಶಕ ಕೆ.ಎನ್.ಶಾಂತಕುಮಾರ್ ಅವರು ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿ ವಚನ, ಕಾವ್ಯಗಳ ಮೂಲಕ ಸಿದ್ದಯ್ಯ ಪುರಾಣಿಕರು ಕನ್ನಡ ಸಾಹಿತ್ಯಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ ಎಂದರು.

ಕಾರ್ಯಕ್ರಮ ಆಯೋಜಿಸಿದ್ದ ಸಿದ್ದಯ್ಯ ಪುರಾಣಿಕರ ಮಗ ಪ್ರಸನ್ನಕುಮಾರ ಅವರು "ನಮ್ಮ ತಂದೆಯ ಸಾಹಿತ್ಯವನ್ನು ಪಸರಿಸುವ ಉದ್ದೇಶದಿಂದ ಈ ಧ್ವನಿ ಸಾಂದ್ರಿಕೆಯನ್ನು ರಾಜ್ಯದ ಸರಕಾರೀ ಶಾಲೆಗಳ ಮಕ್ಕಳಿಗೆ ಉಚಿತವಾಗಿ ವಿತರಿಸಲಾಗುವುದು ಎಂದರು.

ಸಮಾರಂಭದಲ್ಲಿ ಗಾನಸುಧಾ ಸುಗಮ ಸಂಗೀತ ಅಕಾಡಮಿಯ ಗಾಯಕರು ಕಾವ್ಯಾನಂತರು ವಿರಚಿತ ಗೀತೆಗಳನ್ನು ಹಾಡಿದರು. ಸಮಾರಂಭದಲ್ಲಿ ಧ್ವನಿ ಸಾಂದ್ರಿಕೆಗೆ ರಾಗ ಸಂಯೋಜನೆ ಮಾಡಿರುವ ಎಸ್.ಸೋಮಸುಂದರಂ ಪುರಾಣಿಕರ ಮಗಳು ವಿಜಯಾ ನಂದೀಶ್ವರ ಉಪಸ್ಥಿತರಿದ್ದರು.

15.9.2018 Kendra Sahitya Academy

ವಿಜಯವಾಣಿ



ನಿಮ್ಮ ದಿಗ್ವಿಜಯ 24X7 NEWS
ಎಲ್ಲಾ ಡಿಟಿಎಚ್ ನೆಟ್‌ವರ್ಕ್‌ಗಳಲ್ಲೂ ಲಭ್ಯ
278 SUN | 1644 TATA Sky | 677 videocon | 1776 dishtv | 98 airtel

# ಆಡಳಿತದಲ್ಲಿ ಕಡ್ಡಾಯವಾಗಿ ಕನ್ನಡ ಭಾಷೆ ಬಳಕೆ ಆಗಲಿ

## ಕನ್ನಡ ಭಾಷೆ ಬಗ್ಗೆ ರಾಜಕಾರಣಿಗಳ ನಿಷ್ಕಾಳಜಿ | ಸಿದ್ದಯ್ಯ ಪುರಾಣಿಕರ ಬದುಕು ಬರಹ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ

■ ವಿಜಯವಾಣಿ ಸುದ್ದಿಜಾಲ ಬಾಗಲಕೋಟೆ

ಕನ್ನಡ ಭಾಷೆ, ನಾಡು, ನುಡಿ ವಿಶ್ವದಲ್ಲಿ ವಿಶೇಷತೆ ಹೊಂದಿದೆ. ವಿಶ್ವಮಟ್ಟದಲ್ಲಿ ಕನ್ನಡ ಪ್ರಜ್ವಲಿಸಬೇಕಾದ ಈ ಜಾಗತಿಕ ಸಂದರ್ಭ ಕನ್ನಡ ಭಾಷೆ ಬಗ್ಗೆ ಕನ್ನಡಿಗರ ಅಭಿಮಾನ ಶೂನ್ಯವಾಗಿದೆ. ಕನ್ನಡ ಭಾಷೆ ಬಗ್ಗೆ ರಾಜಕಾರಣಿಗಳು ನಿಷ್ಕಾಳಜಿ ತೋರುತ್ತಿದ್ದಾರೆ. ಮಂತ್ರಿಗಳು, ಅಧಿಕಾರಿಗಳು ಆಡಳಿತ ಭಾಷೆಯಾಗಿ ಕನ್ನಡ ಬಳಸದಿರುವುದು ದುರಂತದ ಸಂಗತಿ ಎಂದು ಖ್ಯಾತ ಸಾಹಿತಿ ಸಿದ್ಧಲಿಂಗಯ್ಯ ಕಳವಳ ವ್ಯಕ್ತಪಡಿಸಿದರು.

ನಗರದ ಬಿವಿವಿ ಸಂಘದ ಬಸವೇಶ್ವರ ಕಲಾ ಮಹಾವಿದ್ಯಾಲಯದ ಸಭಾಭವನದಲ್ಲಿ ಶನಿವಾರ ಸಾಹಿತಿ ಸಿದ್ದಯ್ಯ ಪುರಾಣಿಕ ಜನ್ಮ ಶತಮಾನೋತ್ಸವ ನಿಮಿತ್ತ ಕೇಂದ್ರ ಸಾಹಿತ್ಯ ಅಕಾಡೆಮಿ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಸಿದ್ದಯ್ಯ ಪುರಾಣಿಕರ ಬದುಕು ಬರಹ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿರುವ ಅನ್ಯ ಭಾಷಿಕರು ನಮ್ಮ ಭಾಷೆಗೆ ಮೋಸ ಮಾಡುತ್ತಿದ್ದಾರೆ. ಕನ್ನಡಿಗರಿಗೆ ಇದು ಗೊತ್ತಾಗುತ್ತಿಲ್ಲ. ಇದನ್ನು ಅರಿತುಕೊಳ್ಳಲು ಮುಂದಾಗದಿರುವುದು ಶೋಚನೀಯ ಸಂಗತಿ. ಹೈದ್ರಾಬಾದ್ ಕರ್ನಾಟಕ ಭಾಗದ ರಾಯಚೂರ ಮೂಲದ ಸಿದ್ದಯ್ಯ ಪುರಾಣಿಕರ ಕನ್ನಡ ಪ್ರೀತಿ ನಮ್ಮೆಲ್ಲರಿಗೂ ಮಾದರಿಯಾಗಿದೆ. ಉರ್ದು, ಇಂಗ್ಲಿಷ್ ಭಾಷೆಯಲ್ಲಿ ಶಿಕ್ಷಣ ಪಡೆದು ಮಾಮಲೆದಾರರಾಗಿ, ಸ್ವಾತಂತ್ರ್ಯ ಭಾರತ ಐಎಎಸ್ ಅಧಿಕಾರಿಯಾಗಿ ಸೇವೆ ಸಲ್ಲಿಸಿದರು. ಕನ್ನಡ ಭಾಷೆಗೆ ತಮ್ಮದೆಯಾದ ರೀತಿಯಲ್ಲಿ ವಿಶೇಷ ಕೊಡುಗೆ ನೀಡಿದ್ದಾರೆ ಎಂದರು.



ಬಾಗಲಕೋಟೆಯಲ್ಲಿ ಹಮ್ಮಿಕೊಂಡಿದ್ದ ಸಿದ್ದಯ್ಯ ಪುರಾಣಿಕರ ಬದುಕು ಬರಹ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಖ್ಯಾತ ಸಾಹಿತಿ ಸಿದ್ಧಲಿಂಗಯ್ಯ ಉದ್ಘಾಟಿಸಿದರು. ಶಾಸಕ ವೀರಣ್ಣ ಚರಂತಿಮಠ ಇದ್ದರು.

ಫ್ರೆಂಚ್, ಸ್ಪಾನಿಷ್, ಇಂಗ್ಲಿಷ್ ಸೇರಿ ಅನೇಕ ಭಾಷೆಗಳಲ್ಲಿ ಇಂದು ವಚನಗಳು ಭಾಷಾಂತರವಾಗಿವೆ. ವಿಶ್ವದ ಎಲ್ಲ ಜನರು ವಚನಗಳಿಗೆ ಮನಸೋಲುತ್ತಿದ್ದಾರೆ. ಆದರೆ, ನಮ್ಮ ಯುವ ಜನತೆ ಶರಣರ ವಚನಗಳನ್ನು ತಿಳಿದುಕೊಳ್ಳುತ್ತಿಲ್ಲ. ಕನ್ನಡ ಭಾಷೆ, ಸಂಸ್ಕೃತಿ ಪರಂಪರೆ ಉಳಿಸಿ ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿ. ಏಕೀಕರಣ ಸಂದರ್ಭ ಬೀದರ ಜಿಲ್ಲೆ ಕರ್ನಾಟಕದಿಂದ ಬಿಟ್ಟು ಹೋಗುವ ಸಾಧ್ಯತೆಗಳಿದ್ದವು. ಅಂದು ಅಧಿಕಾರಿಯಾಗಿದ್ದ ಸಿದ್ದಯ್ಯ ಪುರಾಣಿಕರು ಚಾಣಾಕ್ಷತನದಿಂದ ನಮ್ಮಲ್ಲೆ ಉಳಿಸಿಕೊಂಡರು. ಅವರಲ್ಲಿನ ಕನ್ನಡ ಬದ್ಧತೆ ಅನುಕರಣೀಯ ಎಂದರು.

ಸಿದ್ದಯ್ಯ ಪುರಾಣಿಕರ ಮೇಲೆ ಮಾರ್ಕ್ಸ್ ಪ್ರಭಾವ ಆಗಿತ್ತು ಎನಿಸುತ್ತದೆ. ಅವರ ಸಾಹಿತ್ಯ ರಚನೆಯಲ್ಲಿ ಸಮನ್ವಯತೆ ಎದ್ದು ಕಾಣುತ್ತದೆ. ತುರ್ತು ಪರಿಸ್ಥಿತಿಯನ್ನು ಧೈರ್ಯದಿಂದ ವಿರೋಧಿಸಿದ್ದರು. ಜೀವನಕ್ಕೆ ವಿಶೇಷ ನೀತಿ ರೂಪಿಸಿದ್ದರು. ಜಾತಿ, ಧರ್ಮ, ಅಧಿಕಾರದ ಪ್ರಭಾವಕ್ಕೆ ಒಳಗಾಗದೇ ಮಾನವೀಯತೆ ನೆಲೆಗಟ್ಟಿನಲ್ಲಿ ಬದುಕಬೇಕು ಎಂದು ಅವರ ಒತ್ತಾಸೆ ಆಗಿತ್ತು. ಬಡವರ ಪರ ನಿಲುವು ಹೊಂದಿದ್ದರು. ಇಂದು ವಿಶ್ವದೆಲ್ಲೆಡೆ ಕಪ್ಪು ಮತ್ತು ಬಿಸಿ ಬಣ್ಣದ ಬಗ್ಗೆ ವ್ಯಾತ್ಯಾಸಗಳನ್ನು ಕಾಣುತ್ತೇವೆ. ಆದರೆ, ಪುರಾಣಿಕರು ಕಪ್ಪು ಬಣ್ಣದ ಬಗ್ಗೆ ಪ್ರೀತಿ ಹೊಂದಿದ್ದರು. ರಾಮ, ಕೃಷ್ಣ, ಶನಿ ದೇವರುಗಳೆಲ್ಲ ಕಪ್ಪು ವರ್ಣದಲ್ಲಿವೆ. ಕಪ್ಪು ವರ್ಣದವರು ಕೀಳರಲ್ಲ, ಬಿಳಿ ಬಣ್ಣ ಶ್ರೇಷ್ಠವಲ್ಲ. ಎಲ್ಲವೂ ಸಮಾನ ಎಂದು ಪುರಾಣಿಕರು ಪ್ರತಿಪಾದಿಸಿದ್ದಾರೆ. ಆ ಕಾಲದಲ್ಲಿ ಕುವೆಂಪು, ಬೇಂದ್ರೆ ಅವರಂತಹ ಆಲದ ಮರದ ನೆರಳಿನಲ್ಲಿ ಪುರಾಣಿಕರಿಗೆ ಅಷ್ಟೊಂದು ಪ್ರಚಾರ ಸಿಗಲಿಲ್ಲ. ಆದರೆ, ಅವರು ರಚಿಸಿದ ಹೊತ್ತಿತ್ತೋ.. ಹೊತ್ತಿತೋ.. ಕನ್ನಡದ ದೀಪ ಕವಿತೆ ಇಂದಿಗೂ ಪ್ರಸಿದ್ಧವಾಗಿದೆ ಎಂದರು.

ಲೇಖಕ ಡಾ. ಅಮೇಶ ನುಗಡೋಣಿ ಆಶಯ ಭಾಷಣ ಮಾಡಿದರು. ಸಾಹಿತಿ ಅಕಾಡೆಮಿ ಪ್ರಾಧಾನ ಕಾರ್ಯದರ್ಶಿ ಎಸ್.ಪಿ. ಮಹಾಲಿಂಗೇಶ್ವರ, ಸಲಹಾ ಸಮಿತಿ ಸದಸ್ಯರಾದ ಡಾ. ಬಾಳಾಸಾಹೇಬ ಲೋಕಾಪುರ, ಸಿದ್ದಯ್ಯ ಪುರಾಣಿಕ ಅವರ ಪುತ್ರ ಪ್ರಸನ್ನಕುಮಾರ, ಡಾ.ಕೆ. ಪ್ರಹ್ಲಾದ, ಬಿವಿವಿ ಸಂಘದ ಕಾಲೇಜು ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಸಜ್ಜನ ಬೇವೂರ, ಪ್ರಾಚಾರ್ಯ ಡಾ.ವಿ.ಎಸ್. ಕಟಗಿಹಳ್ಳಿಮಠ ಮತ್ತಿತರರಿದ್ದರು.

> ಸಿದ್ಧಲಿಂಗಯ್ಯ ಬಂಡಾಯ ಸಾಹಿತಿ ಆದರೂ ಕೂಡ ಸಮಾಜದಲ್ಲಿ ಸಂಘರ್ಷ, ಕಲಹಕ್ಕೆ ದಾರಿ ಕೊಟ್ಟವರಲ್ಲ. ತಮ್ಮದೇ ಯಾದ ವಿಚಾರಧಾರೆಯೊಂದಿಗೆ ಗುರುತಿಸಿಕೊಂಡವರು. ಬಂಡಾಯ ಸಾಹಿತಿಗಳು, ಪ್ರಗತಿಪರ ಚಿಂತಕರು ಸಾಹಿತಿ ಸಿದ್ಧಲಿಂಗಯ್ಯ ಅವರನ್ನು ಅನುಕರಣೆ ಮಾಡಬೇಕು.
>
> | ವೀರಣ್ಣ ಚರಂತಿಮಠ, ಶಾಸಕ, ಬಿವಿವಿ ಸಂಘದ ಕಾರ್ಯಾಧ್ಯಕ್ಷ

> ಬಿವಿವಿ ಸಂಘವು ಸಮಾಜಕ್ಕೆ ಸಾಕಷ್ಟು ಕೊಡುಗೆ ನೀಡಿದೆ. ಅಕ್ಷರ ದಾಸೋಹ ಮಾಡಿದೆ. ಕಾರ್ಯಾಧ್ಯಕ್ಷ, ಶಾಸಕ ವೀರಣ್ಣ ಚರಂತಿಮಠ ಮಾದರಿ ರಾಜಕಾರಣಿಯಾಗಿ, ದಕ್ಷ ಆಡಳಿತಗಾರರಾಗಿ ಸಂಘವನ್ನು ಯಶಸ್ವಿಯಾಗಿ ಮುನ್ನಡೆಸಿದ್ದಾರೆ. ಕನ್ನಡ ಭಾಷೆ, ನಾಡು, ನುಡಿಗಾಗಿ ಬಿವಿವಿ ಸಂಘದ ಶ್ರಮಿಸುತ್ತಿರುವುದು ಶ್ಲಾಘನೀಯ.
>
> | ಸಿದ್ಧಲಿಂಗಯ್ಯ ಸಾಹಿತಿ

ಸಿದ್ದಯ್ಯ ಪುರಾಣಿಕ ರಾಷ್ಟ್ರೀಯ ವಿಚಾರ ಸಂಕಿರಣ

# ಬಿವಿವಿ ಸಂಘ ಡೀಮ್ಡ್ ವಿವಿ ಆಗಲಿ

## ■ ಯಾವುದೇ ಧರ್ಮ ಟೀಕೆ ನಮ್ಮ ಸಂಸ್ಕೃತಿಯಲ್ಲ ■ ಎಲ್ಲ ಧರ್ಮಗಳಲ್ಲೂ ಇವೆ ಕೆಟ್ಟ-ಒಳ್ಳೆಯ ಅಂಶಗಳು

**ಬಾಗಲಕೋಟೆ:** ಕಳೆದ 111 ವರ್ಷಗಳ ಹಿಂದೆ ಸ್ಥಾಪನೆಯಾದ ಬಾಗಲಕೋಟೆಯ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘ ಇಂದು ಹೆಮ್ಮರವಾಗಿ ಬೆಳೆದಿದೆ. 151 ಅಂಗ ಸಂಸ್ಥೆಗಳು ಇದರಡಿ ಕಾರ್ಯ ನಿರ್ವಹಿಸುತ್ತಿರುವುದು ಹೆಮ್ಮೆಯ ವಿಷಯ.ಸ್ವಾತಂತ್ರ್ಯ ವಿಶ್ವವಿದ್ಯಾಲಯ ಆಗುವ ಎಲ್ಲ ಅರ್ಹತೆ ಈ ಸಂಸ್ಥೆಗಿದೆ. ಶೀಘ್ರವೇ ಇದೊಂದು ಡೀಮ್ಡ್ ವಿವಿ ಆಗಿ ಪರಿವರ್ತನೆಯಾಗಲಿ ಎಂದು ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಸಮಿತಿ ಸಂಚಾಲಕ ಡಾ। ಸಿದ್ದಲಿಂಗಯ್ಯ ಆಶಯ ವ್ಯಕ್ತಪಡಿಸಿದರು.

ನಗರದ ಬಿವಿವಿ ಸಂಘದ ಬಸವೇಶ್ವರ ಕಲಾ ಕಾಲೇಜಿನಲ್ಲಿ ಸಿದ್ದಯ್ಯ ಪುರಾಣಿಕ ಜನ್ಮ ಶತಮಾನೋತ್ಸವ ಅಂಗವಾಗಿ ಹಮ್ಮಿಕೊಂಡಿದ್ದ ಪುರಾಣಿಕರ ಬದುಕು-ಬರಹ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಬಿವಿವಿ ಸಂಘಕ್ಕೆ ಮಾಜಿ ಪ್ರಧಾನಿ ಲಾಲಬಹಾದ್ದೂರ ಶಾಸ್ತ್ರಿ ಕುವೆಂಪು, ಯ.ಆರ್. ರಾವ್ ಸೇರಿದಂತೆ ದೇಶದ ಹಲವು ಗಣ್ಯರು ಬಂದಿದ್ದಾರೆ. ನಾನೂ ಕೂಡ ಹಲವು ಬಾರಿ ಈ ಸಂಘಕ್ಕೆ ಭೇಟಿ ನೀಡಿದ್ದೇನೆ. ಇದರ ಬೆಳವಣಿಗೆ ಕಂಡು ತುಂಬ ಖುಷಿ ಆಗುತ್ತದೆ. ಡೀಮ್ಡ್ ವಿವಿ ಆಗುವ ಎಲ್ಲ ಅರ್ಹತೆ ಈ ಸಂಸ್ಥೆಗಿದ್ದು, ಬಿವಿವಿ ಸಂಘದ ಡೀಮ್ಡ್ ವಿವಿಯಾಗಲಿ. ಅದಕ್ಕೆ ಮೊದಲ ಕುಲಪತಿಯಾಗಿ ಡಾ।ವೀರಣ್ಣ ಚರಂತಿಮಠ ಕಾರ್ಯ ನಿರ್ವಹಿಸಲಿ ಎಂದರು.

ಧರ್ಮ ಟೀಕೆ ಸಂಸ್ಕೃತಿಯಲ್ಲ: ಇಂದು ಧರ್ಮ- ಧರ್ಮಗಳನ್ನು ಟೀಕಿಸುವ ಕೆಲಸ ನಡೆಯುತ್ತಿದೆ. ಯಾವುದೇ ಧರ್ಮ ಟೀಕಿಸುವುದು ನಮ್ಮ ಸಂಸ್ಕೃತಿಯಲ್ಲ, ಅದು ಸಾಧುವೂ ಅಲ್ಲ, ಎಲ್ಲ ಧರ್ಮಗಳಲ್ಲಿ ಕೆಟ್ಟ ಮತ್ತು ಒಳ್ಳೆಯ ಅಂಶಗಳಿವೆ. ಅದರಲ್ಲಿ ಒಳ್ಳೆಯ ಅಂಶಗಳನ್ನು ಮಾತ್ರ ಪರಿಚಯಿಸುವ, ಔದಾರ್ಯದಿಂದ ನೋಡುವ ಗುಣ ಬೆಳೆಸಿಕೊಳ್ಳಬೇಕು. ಇಂದಿನ ಯುವ ಸಮುದಾಯಕ್ಕೆ ಧರ್ಮ ಟೀಕಿಸುವ ಸಂಸ್ಕೃತಿ ನಮ್ಮದಲ್ಲ ಎಂದು ಹೇಳಬೇಕಿದೆ ಎಂದು ತಿಳಿಸಿದರು.

ಪುರಾಣಿಕರ ಧೈರ್ಯ ಇತರ ಕವಿಗಳಿಲ್ಲ: ಸಿದ್ದಯ್ಯ ಪುರಾಣಿಕ ಅವರಲ್ಲಿ ಸಮಾಜವಾದಿ ನಿಲುವು ಇತ್ತು. ಇದರ ಬಗ್ಗೆ ಅಧ್ಯಯನ ನಡೆಸಬೇಕಿದೆ. ಪ್ರಕೃತಿಯನ್ನು ಬಲು ಸುಂದರವಾಗಿ ವರ್ಣಿಸಿದ್ದಾರೆ. ಅಂತಹ ಮೇರು ವ್ಯಕ್ತಿತ್ವದ ಕವಿಯನ್ನು ನಾವೆಲ್ಲ ಮರೆತಿರುವುದು ದುರಂತ. ಆದರೆ, ಇಂದು ಸಿದ್ದಯ್ಯ ಪುರಾಣಿಕರ ಸ್ಮರಣೆ, ಬರಹ ನಡೆಯುತ್ತಿದೆ. ಇದು ಶ್ಲಾಘನೀಯ ಕಾರ್ಯ ಎಂದರು.

ಪುರಾಣಿಕರು, ಈ ನಾಡಿಗೆ ಬಹುದೊಡ್ಡ ಕೊಡುಗೆ ನೀಡಿದ್ದಾರೆ. ಒಬ್ಬ ಐಎಎಸ್ ಅಧಿಕಾರಿಯಾಗಿಯೂ ಅವರು ಸರ್ಕಾರವನ್ನು ವ್ಯವಸ್ಥೆಯನ್ನು ಬರಹದ ಮೂಲಕ ಪ್ರತಿಭಟಿಸುವ ಕೆಲಸ ಮಾಡಿದ್ದಾರೆ. ಅವರಿಗೆ ಇದ್ದ ಧೈರ್ಯ, ಕನ್ನಡದ ಇತರ ಯಾವ ಕವಿಗಳಿಗೂ ಇರಲಿಲ್ಲ. ಅವರಲ್ಲಿ ಬಡವರ ಪರವಾದ ನಿಲುವು ಇತ್ತು. ಸಮಾಜವಾದದ ಚಿಂತನೆ ಇತ್ತು ಎಂ[illegible]ಸಿದರು.

ಕಪ್ಪು ಕೀಳಲ್ಲ: ಕಪ್ಪು-ಬಿಳಿ ಬಗ್ಗೆ ವಾದಗಳಿವೆ. ನಮ್ಮ ದೇವರುಗಳೆಲ್ಲ ಕಪ್ಪು. ದೇಶದ ದೊಡ್ಡ ದೊಡ್ಡ ನಾಯಕರೂ ಕಪ್ಪಗಿದ್ದಾರೆ. ಕಪ್ಪಗಿದ್ದವರೂ ಲಕ್ಷಣವಾಗಿದ್ದಾರೆ. ಆದರೂ, ಕಪ್ಪು ಬಣ್ಣವನ್ನು ಕೀಳಾಗಿ ಕಾಣುವ ಪದ್ಧತಿ ಇದೆ. ಇಂದ[illegible]ವು ದೇವರುಗಳಿಗೂ ಬಿಳಿಯ ಬಣ್ಣ ಬಳಿದಿದ್ದಾರೆ. ಇದು ವಿಷಾದನೀಯ. ಕಪ್ಪು-ಬಿಳಿಯ ವ್ಯತ್ಯಾಸದ ಕುರಿತೂ ಪುರಾಣಿಕರು ಬರೆದಿದ್ದಾರೆ ಎಂದರು.

ಶ್ರೇಷ್ಠ ಆಧುನಿಕ ವಚನಕಾರರು: ಸಿದ್ದಯ್ಯ ಪುರಾಣಿಕ, ನಮ್ಮ ಶ್ರೇಷ್ಠ ಆಧುನಿಕವಚನಕಾರರಾಗಿದ್ದಾರೆ. ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಆದರೆ, ಅವರು ಈ ನಾಡಿನಲ್ಲಿ ಪ್ರಖ್ಯಾತಿ ಹೊಂದಲಿಲ್ಲ, ಅವರ ಬರಹಗಳು ಪ್ರಖ್ಯಾತಿ ಹೊಂದಿವೆ. ಹೈದ್ರಾಬಾದ್ ಕರ್ನಾಟಕದವರು ಎಂಬ ಕಾರಣಕ್ಕೋ, ಕುವೆಂಪು-ಬೇಂದ್ರೆ ಅವರಂತಹ ದೊಡ್ಡಾಳುಗಳ ನೆರಳಿನಿಂದಲೋ ಅವರಿಗೆ ಸೂಕ್ತ ಪ್ರಚಾರ ಸಿಗಲಿಲ್ಲ, ಇಂತಹ ಮೇರು ಕವಿಯನ್ನು ಮರೆತದ್ದು ದುರಂತ. ಈಗ ಕೇಂದ್ರ ಸಾಹಿತ್ಯ ಅಕಾದೆಮಿ ಮೂಲಕ ಅವರ ಸ್ಮರಣೆ ನಡೆಯುತ್ತಿರುವುದು ಒಳ್ಳೆಯ ಕಾರ್ಯ ಎಂದು ಹೇಳಿದರು.

ಬಿವಿವಿ ಸಂಘದ ಕಾಲೇಜು ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಸಜ್ಜನ, ಕೇಂದ್ರ ಸಾಹಿತ್ಯ ಅಕಾದೆಮಿಯ ಪ್ರಾದೇಶಿಕ ಕಾರ್ಯದರ್ಶಿ ಎಸ್.ಪಿ. ಮಹಾಲಿಂಗೇಶ್ವರ, ಸದಸ್ಯ ಪ್ರೊ। ಬಾಳಾಸಾಹೇಬ ಲೋಕಾಪುರ, ಲೇಖಕ ಅಮರೇಶ ನುಗಡೋಣಿ, ಬಸವೇಶ್ವರ ಕಲಾ ಕಾಲೇಜಿನ ಪ್ರಾಚಾರ್ಯ ಡಾ।ವಿ.ಎಸ್. ಕಟಗಿಹಳ್ಳಿಮಠ ಉಪಸ್ಥಿತರಿದ್ದರು.



ಬಾಗಲಕೋಟೆ: ಸಿದ್ದಯ್ಯ ಪುರಾಣಿಕ ಅವರ ಪುತ್ರ ಪ್ರಸನ್ನಕುಮಾರ ದಂಪತಿಯನ್ನು ಸನ್ಮಾನಿಸಲಾಯಿತು.

## ಕನ್ನಡ ಕಡತಕ್ಕೆ ಮಾತ್ರ ಸಿಎಂ, ಸಚಿವರು ಸಹಿ ಮಾಡಲಿ



ಬಾಗಲಕೋಟೆ: ಬಿವಿವಿ ಸಂಘದ ಬಸವೇಶ್ವರ ಕಲಾ ಕಾಲೇಜಿನಲ್ಲಿ ನಡೆದ ಸಿದ್ದಯ್ಯ ಪುರಾಣಿಕರ ಬದುಕು-ಬರಹ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಡಾ।ಸಿದ್ದಲಿಂಗಯ್ಯ ಮಾತನಾಡಿದರು.

**ಬಾಗಲಕೋಟೆ:** ಕನ್ನಡ ಭಾಷೆ, ಪರಂಪರೆ, ಸಂಸ್ಕೃತಿಗೆ ದೊಡ್ಡ ಇತಿಹಾಸವಿದೆ. ರಾಜ್ಯದಲ್ಲಿ ಆಡಳಿತ ನಡೆಸುವ ಮುಖ್ಯಮಂತ್ರಿ, ಸಚಿವರು ಕನ್ನಡ ಕಡತಗಳಿಗೆ ಮಾತ್ರ ಸಹಿ ಮಾಡಬೇಕು. ಅನ್ಯ ಭಾಷೆಯ ಕಡತಗಳು ಅವರೆದುರಿಗೆ ಬಂದರೆ ಮರಳಿ ಕಳುಹಿಸಬೇಕು. ಇಂತಹ ಧೈರ್ಯ ಮಾಡಿದಾಗ ಭಾಷೆ ಇನ್ನಷ್ಟು ಗಟ್ಟಿಯಾಗಿ ಬೆಳೆಯಲು ಸಾಧ್ಯ ಎಂದು ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಸಮಿತಿ ಸಂಚಾಲಕ ಡಾ।ಸಿದ್ದಲಿಂಗಯ್ಯ ಹೇಳಿದರು.

ನಗರದ ಬಿವಿವಿ ಸಂಘದ ಬಸವೇಶ್ವರ ಕಲಾ ಕಾಲೇಜಿನಲ್ಲಿ ಸಿದ್ದಯ್ಯ ಪುರಾಣಿಕರ ಜನ್ಮ ಶತಮಾನೋತ್ಸವ ಅಂಗವಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಸಿದ್ದಯ್ಯ ಪುರಾಣಿಕರ ಬದುಕು-ಬರಹ ಕುರಿತ ರಾಷ್ಟ್ರೀಯ ವಿಚಾರಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡ ಭಾಷೆ, ಪರಂಪರೆ ಉಳಿದು, ಬೆಳೆಯಲು ಹಲವರ ಶ್ರಮ-ಬರಹ ಅಡಗಿದೆ. ಅದರಲ್ಲಿ ಸಿದ್ದಯ್ಯ ಪುರಾಣಿಕರು ಅಗ್ರಜರು. ಅನ್ಯ ಭಾಷೆಯ ಕಡತಗಳನ್ನು ಸಚಿವರು, ಮುಖ್ಯಮಂತ್ರಿಗಳು ಮರಳಿ ಕಳುಹಿಸಬೇಕು ಎಂದು ಅವರು ಪದೇ ಪದೇ ಹೇಳುತ್ತಿದ್ದರು. ಇದು ಅವರ ಕನ್ನಡ ಭಾಷಾಭಿಮಾನ ತೋರಿಸುತ್ತದೆ ಎಂದರು.

ನಮ್ಮ ಕನ್ನಡ ವಚನ ಸಾಹಿತ್ಯದ ಶ್ರೇಷ್ಠತೆ ವಿದೇಶಿಗರಿಗೂ ತಿಳಿದಿದೆ. ಅಲ್ಲಿನ ಜನರು ತರ್ಜುಮೆಗೊಂಡ ಕನ್ನಡ ವಚನ ಸಾಹಿತ್ಯ ಓದುತ್ತಿದ್ದಾರೆ. ಆದರಿಂದ ಕನ್ನಡ ವಚನಕಾರರ ಬಗ್ಗೆ ಅಪಾರ ಗೌರವವೂ ಇಟ್ಟುಕೊಂಡಿದ್ದಾರೆ. ಆದರೆ, ನಮ್ಮಲ್ಲಿ, ಭಾಷಾಭಿಮಾನ ಕಡಿಮೆಯಾಗುತ್ತಿದೆ. ಶ್ರೇಷ್ಠ ಕವಿಗಳು, ಸಾಹಿತಿಗಳು, ವಚನಕಾರರ ಬಗ್ಗೆಯೂ ಹೆಚ್ಚಿನ ಆಸಕ್ತಿ ತೋರುತ್ತಿಲ್ಲ, ಭಾಷಾಭಿಮಾನ ಪ್ರತಿಯೊಬ್ಬರೂ ಬೆಳೆಸಿಕೊಳ್ಳದಿದ್ದರೆ ಮುಂದೊಂದು ದಿನ ಕನ್ನಡ ಅತಂತ್ರವಾಗುವ ಸಂಭವವಿದೆ ಎಂದರು.

ಬೀದರ ರಾಜ್ಯದಲ್ಲಿ ಉಳಿಸಿದ್ದ ಪುರಾಣಿಕರು: ಸಿದ್ದಯ್ಯ ಪುರಾಣಿಕರು ಈ ನೆಲದ ಒಬ್ಬ ಶ್ರೇಷ್ಠ ವಚನಕಾರರು. ಆದರೆ, ಅವರು ಹೈದ್ರಾಬಾದ್ ಕರ್ನಾಟಕ ಭಾಗದವರು, ಕುವೆಂಪು, ಬೇಂದ್ರೆ ಅವರಂತಹ ಬೃಹತ್ ಆಲದ ಮರಗಳ ಬರಹದಲ್ಲಿ ಇವರು ಬೆಳೆಯಲು, ಪ್ರಚಾರಕ್ಕೆ ಬರಲು ಆಗಿರಲಿಕ್ಕಿಲ್ಲ. ಕರ್ನಾಟಕ ಏಕೀಕರಣದ ವೇಳೆ ಬೀದರ ಜಿಲ್ಲೆಯನ್ನು ಹೈದ್ರಾಬಾದ್‌ಗೆ ಸೇರಿಸಲು ದೊಡ್ಡ ಪ್ರಯತ್ನ ನಡೆದಿತ್ತು. ಇದರ ಕುರುಹು ಸಿದ್ದಯ್ಯ ಪುರಾಣಿಕರಿಗೆ ಸಿಕ್ಕಿತ್ತು. ಹೀಗಾಗಿ ಬೀದರನ ಹಲವು ಹೋರಾಟಗಾರರಿಗೆ ಪ್ರೇರೇಪಣೆ ನೀಡಿ ಹೋರಾಟ, ಸಿಎಂಗೆ ಮನವಿ ಕೊಡಲು ಸೂಚಿಸಿದ್ದರು. ಅದರ ಫಲವಾಗಿ ಬೀದರ ಕರ್ನಾಟಕದಲ್ಲೇ ಉಳಿಯಿತು. ಮುಂದೆ ಬೀದರಲ್ಲಿ ನಾಡಹಬ್ಬ ಆಚರಣೆಗೂ ಪ್ರೇರಣೆಯಾದರು ಎಂದರು.

ರವೀಂದ್ರ ಕಲಾ ಕ್ಷೇತ್ರದ ರೂವಾರಿ: ಬೆಂಗಳೂರಿನಲ್ಲಿ ರವೀಂದ್ರ ಕಲಾ ಕ್ಷೇತ್ರ ನಾವೆಲ್ಲ ನೋಡುತ್ತಿರುವುದಕ್ಕೆ ಕಾರಣ ಸಿದ್ದಯ್ಯ ಪುರಾಣಿಕರು. ಅವರು ಒಬ್ಬ ಐಎಎಸ್ ಅಧಿಕಾರಿಯಾಗಿ, ಕವಿಯಾಗಿ, ಶ್ರೇಷ್ಠ ಚಿನಕಾರರಾಗಿ ಈ ನೆಲಕ್ಕೆ ನೀಡಿದ ಕೊಡುಗೆ ಅಪಾರ. ಅವರಂತಹ ಶ್ರೇಷ್ಠರನ್ನು ಇಂದಿನ ತಲೆಮಾರಿಗೆ ಪರಿಚಯಿಸುವ ಕಾರ್ಯ ನಡೆಯುತ್ತಿರುವುದು ಶ್ಲಾಘನೀಯ ಎಂದರು.

### ವಿದ್ಯಾರ್ಥಿಗಳ ಕ್ರಿಯೆಟಿವಿಟಿ!



ಬಿವಿವಿ ಸಂಘದ ಬಸವೇಶ್ವರ ಕಲಾ ಕಾಲೇಜಿನಲ್ಲಿ ನಡೆದ ರಾಷ್ಟ್ರೀಯ ವಿಚಾರ ಸಂಕೀರ್ಣದ ಸಮಗ್ರ ಚಿತ್ರಣವುಳ್ಳ ಕೋಲ್ಯಾಜ್ ತಯಾರಿ, ಸ್ಥಳದಲ್ಲೇ ನೀಡಿದ ಪತ್ರಿಕೋದ್ಯಮ ವಿದ್ಯಾರ್ಥಿಗಳ ಕ್ರಿಯೇಟಿವಿಟಿಯನ್ನು ಡಾ।ಸಿದ್ದಲಿಂಗಯ್ಯ ಅವರು ಶ್ಲಾಘಿಸಿದರು. ಕಾಲೇಜಿನ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥೆ ಡಾ।ದ್ಯಾಮಕ್ಕ ಪಾಟೀಲ ಮಾರ್ಗದರ್ಶನದಲ್ಲಿ ಪತ್ರಿಕೋದ್ಯಮ ವಿದ್ಯಾರ್ಥಿಗಳು ಕಾರ್ಯಕ್ರಮದ ವಿವಿಧ ಚಿತ್ರಗಳು, ಅದಕ್ಕೊಂದು ಪುಟ್ಟ ಬರಹ ನೀಡಿ, ಕೋಲ್ಯಾಜ್ ತಯಾರಿಸಿದ್ದರು.

### ಕಪ್ಪು ಬಣ್ಣವೂ- ಜಾಹೀರಾತುಗಳೂ

ಡಾ।ಸಿದ್ದಲಿಂಗಯ್ಯ ಅವರು ಕಪ್ಪು-ಬಿಳಿ ಬಣ್ಣದ ಕುರಿತು ಮಾತನಾಡುವ ವೇಳೆ, ಟಿವಿಗಳಲ್ಲಿ ಪ್ರಸಾರವಾಗುವ ಜಾಹಿರಾತುವೊಂದನ್ನು ಉಲ್ಲೇಖಿಸಿ, ವಿರೋಧಿಸಿದರು. ಕಪ್ಪಗಿರುವ ಮಹಿಳೆ, ಅದೇ ಕಾರಣಕ್ಕೆ ಆತ್ಮಹತ್ಯೆ ಹಂತಕ್ಕೂ ಹೋಗುತ್ತಾಳೆ. ಆದರೆ, ಅವಳಿಗೆ ಒಂದು ಕಂಪನಿಯ ಸೌಂದರ್ಯವರ್ಧಕ ಕೊಡಲಾಗುತ್ತದೆ. ಆಗ ಅವಳು ಬಿಳಿಯಾಗಿ ಪರಿವರ್ತನೆಯಾಗುತ್ತಾಳೆ. ಇದು ಜಾಹೀರಾತು ವಸ್ತು. ಕಪ್ಪು ಬಣ್ಣವನ್ನು ಕೀಳಾಗಿ ಕಾಣುವ, ಅನುಭವ ಇಲ್ಲದವರು ಕೊಡುವ ವಿಷಯ ಜಾಹೀರಾತು ಮಾಡಲಾಗುತ್ತಿದೆ. ಕಪ್ಪು ಬಣ್ಣ ಕೀಳಾಗಿ ಕಾಣುವುದು ಸರಿಯಲ್ಲ ಎಂದರು.

### ಸಿದ್ದಲಿಂಗಯ್ಯರನ್ನು ಅನುಸರಿಸಲಿ

ರಾಷ್ಟ್ರೀಯ ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿದ್ದ ಬಿವಿವಿ ಸಂಘದ ಕಾರ್ಯಾಧ್ಯಕ್ಷ, ಶಾಸಕ ಡಾ।ವೀರಣ್ಣ ಚರಂತಿಮಠ ಮಾತನಾಡಿ, ಎಡಪಂಥೀಯ, ಪ್ರಗತಿಪರರು ಅಂದುಕೊಳ್ಳುವವರು, ಪ್ರಚಾರಪ್ರಿಯರು, ಡಾ।ಸಿದ್ದಲಿಂಗಯ್ಯ ಅವರನ್ನು ಅನುಸರಿಸಿದರೆ ಯಾವುದೇ ಸಮಸ್ಯೆ ಬರುವುದಿಲ್ಲ ಎಂದರು. ಅಲ್ಲದೇ ಸಿದ್ದಯ್ಯ ಪುರಾಣಿಕರ ಸ್ಮರಣೆ ನಡೆದಿದ್ದು ಅವರಂತೆ ಹಲಸಂಗಿ ಗೆಳೆಯರ ಬಳಗದ ಮಧುರ ಚೆನ್ನರಂತಹ ಹಲವು ಸಾಧಕರ ಸಾಹಿತಿಗಳ ಕಾರ್ಯಕ್ರಮಗಳೂ ಅಕಾಡೆಮಿಯಿಂದ ನಡೆಯಬೇಕು ಎಂದು ಆಶಿಸಿದರು.

### ನನ್ನ ತಂದೆ ಹೀಗಿದ್ದರು: ಬಿಚ್ಚಿಟ್ಟ ಪುತ್ರ

ಸಿದ್ದಯ್ಯ ಪುರಾಣಿಕ ಅವರ ಕುರಿತಾಗಿ ಎರಡು ಗೋಷ್ಠಿಗಳು ನಡೆದವು. ನವ್ಯೋದಯ ಕವಿಯಾಗಿ, ಆಧುನಿಕ ವಚನಕಾರರಾಗಿ ಸಿದ್ದಯ್ಯ ಪುರಾಣಿಕರು ಎಂಬ ವಿಷಯವನ್ನು ಡಾ।ಗುರುಪಾದ ಮರೇಗುದ್ದಿ, ಪುರಾಣಿಕರ ನಾಟಕಗಳ ತಾತ್ವಿಕ ನೆಲೆಗಳು ವಿಷಯವನ್ನು ರಾಜಶೇಖರ ಹಳೇಮನಿ ಹಾಗೂ ಆತ್ಮಚರಿತ್ರೆಯ ವೈಶಿಷ್ಟ್ಯ ಕುರಿತು ಕೆ.ಆರ್. ಸಿದ್ದಗಂಗಮ್ಮ ವಿಷಯ ಮಂಡಿಸಿದರು. 2ನೇ ಗೋಷ್ಠಿಯಲ್ಲಿ, ಮಕ್ಕಳ ಸಾಹಿತಿಯಾಗಿ ಪುರಾಣಿಕರು ವಿಷಯನ್ನು ಆನಂದ ವಿ. ಪಾಟೀಲ, ಜೀವನ ಚರಿತ್ರೆಗಳ ಹಿಂದಿನ ದರ್ಶನದ ಸ್ವರೂಪ ಕುರಿತು ಶಿವಾನಂದ ವಿರಕ್ತಮಠ ಹಾಗೂ ನನ್ನ ತಂದೆ ಹೀಗಿದ್ದರು ಎಂಬ ವಿಷಯವನ್ನು ಪ್ರಸನ್ನಕುಮಾರ ಪುರಾಣಿಕ ವಿಷಯ ಮಂಡಿಸಿದರು.

ಪ್ರಜಾವಾಣಿ

# ಕಾವ್ಯಾನಂದ ಎನ್ನುವ ಕನ್ನಡದ ದೀಪ

ರಘುನಾಥ ಚ.ಹ.

ನವೋದಯ ಸಂದರ್ಭದ ಪ್ರಮುಖ ಕವಿಗಳಲ್ಲೊಬ್ಬರಾದ ಸಿದ್ಧಯ್ಯ ಪುರಾಣಿಕರು ಕಾವ್ಯದ ಮೂಲಕ ಸಹೃದಯರಿಗೆ ಆನಂದವನ್ನು ಹಂಚಿದವರು. ವಚನಗಳ ಮೂಲಕ ಜನಸಾಮಾನ್ಯರ ಮನಸ್ಸಿನಲ್ಲಿ ವಿಚಾರದ ಕಿಡಿ ಹಚ್ಚಿದವರು. 2018 ಪುರಾಣಿಕರ ಜನ್ಮ ಶತಮಾನೋತ್ಸವ ವರ್ಷ. ಸೆ. 5 ಅವರ ಪುಣ್ಯಸ್ಮರಣೆಯ ದಿನ. 'ಏನಾದರೂ ಆಗು, ಮೊದಲು ಮಾನವನಾಗು' ಎಂದ ಕವಿಯನ್ನು ಮತ್ತೆ ಮತ್ತೆ ಓದಲಿಕ್ಕೆ ಇದಕ್ಕೂ ನೆಪ ಬೇಕೆ?

ಕನ್ನಡ ಕಾವ್ಯಲೋಕದಲ್ಲಿ ಸಿದ್ಧಲಿಂಗಯ್ಯ ಹೆಸರಿನ ಇಬ್ಬರು ಕವಿಗಳಿರುವುದರಿಂದ ಇವರ ನಡುವೆ ಸಿದ್ಧಯ್ಯ ಪುರಾಣಿಕರ ಹೆಸರೂ ಸೇರಿಕೊಂಡು ಗೊಂದಲ ಉಂಟಾಗುತ್ತದೆ. ಆ ಕಾರಣದಿಂದಾಗಿ ಸಿದ್ಧಯ್ಯ ಪುರಾಣಿಕ ಎನ್ನುವುದಕ್ಕಿಂತಲೂ 'ಕಾವ್ಯಾನಂದ' ಎನ್ನುವ ಹೆಸರೇ ಹೆಚ್ಚು ಜನಪ್ರಿಯ ಹಾಗೂ ಆಪ್ತ. ಹೆಸರಿನಲ್ಲಷ್ಟೇ ಗೊಂದಲ; ಕಾವ್ಯಾನಂದರ ರಚನೆಗಳು ರಸಬಾಳೆ ಹಣ್ಣಿನಂಥಹವು. ಕಾವ್ಯದ ಜೊತೆಗೆ ಆನಂದದ ರಸಾನುಭೂತಿಯನ್ನೂ ಹೆಸರಿನಲ್ಲಿ ಮಾತ್ರವಲ್ಲದೆ ಕೃತಿಯಲ್ಲಿಯೂ ಕಾಣಿಸುವುದು ಪುರಾಣಿಕರ ಸಾಹಿತ್ಯದ ವಿಶೇಷ. 'ನಿಸ್ವಾರ್ಥವಾನಂದ: ಸಸ್ವಾರ್ಥ ಕಾವ್ಯ. ಇಂತು ಕಾವ್ಯಾನಂದ ನಾನು ಸುಸ್ವಾನ' ಎನ್ನುವುದು 'ಕಾವ್ಯದೇವಿ'ಯೊಂದಿಗೆ ಅವರ ವಿನ್ನಹ. ಕಾವ್ಯಾನಂದ ಎನ್ನುವುದು ಅವರ ಕಾವ್ಯನಾಮವಷ್ಟೇ ಅಲ್ಲ; ಸಹೃದಯರ ಮೆಚ್ಚುಗೆಯ ಉದ್ಗಾರವೂ ಹೌದು.

ಕನ್ನಡ ಸಾಂಸ್ಕೃತಿಕ ಲೋಕದಲ್ಲಿ ಸಿದ್ಧಯ್ಯ ಪುರಾಣಿಕರದು ವಿಶಿಷ್ಟ ಸಾಧನೆ. ಅವರ ಸಾಧನೆ ಮುಖ್ಯವಾಗಿ ಎರಡು ಬಗೆಯದು. ಮೊದಲನೆಯದು, ಆಡಳಿತಗಾರನಾಗಿ ಕನ್ನಡ ಕಟ್ಟುವ ಕೆಲಸಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದು. ಎರಡನೆಯದು, ವೈವಿಧ್ಯಮಯ ಸಾಹಿತ್ಯವನ್ನು ಸೃಷ್ಟಿಸಿದ್ದು.

ಬೌದ್ಧಿಕ ಕಣ್ಣಾಮುಚ್ಚಾಲೆ ಕಾವ್ಯಾನಂದರ ಕಾವ್ಯದಲ್ಲಿ ಕಡಿಮೆ. ಅವರದು ರಸಾನುಭವದ ಕಾವ್ಯ. ಸಂವಹನದ ದೃಷ್ಟಿಯಿಂದ ಕಾವ್ಯಕ್ಕಿರುವ ಮಿತಿಯನ್ನೂ ಅವರು ಅರಿತಿದ್ದರು. ಆ ಕಾರಣದಿಂದಲೇ ತಮ್ಮ ಅನುಭವವನ್ನು ಜನಸಾಮಾನ್ಯರೊಂದಿಗೆ ಹಂಚಿಕೊಳ್ಳಲು ವಚನ ಮಾಧ್ಯಮವನ್ನು ಬಳಸಿಕೊಂಡರು. ನವೋದಯ ಸಂದರ್ಭದ ಅನೇಕ ಲೇಖಕರಿಗೆ, ಮಕ್ಕಳಿಗಾಗಿ ಬರೆಯುವುದು ಅವರ ಕಾಳಜಿಗಳಲ್ಲೊಂದಾಗಿತ್ತಷ್ಟೇ; ಆ ಬದ್ಧತೆ ಪುರಾಣಿಕರದೂ ಆಗಿತ್ತು. ಮಕ್ಕಳ ಸಾಹಿತ್ಯ ರಚನೆಯನ್ನು ಗಂಭೀರವಾಗಿ ಪರಿಗಣಿಸಿದ ಅವರು, ಕನ್ನಡದ ಚಿಣ್ಣರು ಹಾಡಿಕೊಳ್ಳಲು ಅನೇಕ ಗೀತೆಗಳನ್ನು ರಚಿಸಿದರು.

*ಕಾಲವೆ ನಿನ್ನ ಕೆಳೆ ಬೇಕು, ಅಳಿಕೆ ಬೇಡ ನನಗೆ!*
*ನಿನ್ನ ಪ್ರವಾಹ ಕೊಂಡೊಯ್ಯುತ್ತ ತೇಲಲು*
*ಸತ್ತಮೀನಲ್ಲ ನಾನು,*
*ನಿನಗೆ ಬೇಕಾದತ್ತ ನೀನೆಳೆ, ನನಗೆ ಬೇಕಾದತ್ತ ನಾನೀಜುವೆ!*

'ಸತ್ತಮೀನಲ್ಲ ನಾನು' ಎಂದು ಕಾಲಪುರುಷನಿಗೆ ಸ್ಪಷ್ಟಪಡಿಸಿದ ಕವಿ ಪುರಾಣಿಕರು ತಮ್ಮ ಬದುಕಿನುದ್ದಕ್ಕೂ ಈಸಿದ್ದು ತಮ್ಮೊಲವಿನ ದಾರಿಗಳಲ್ಲೇ. ಯಾವ ದಾರಿಯಲ್ಲಿ ನಡೆದರೂ ತಮ್ಮತನವನ್ನು ಬಿಟ್ಟುಕೊಡದವರು ಅವರು. ಎಲ್ಲ ದಾರಿಗಳ ಅಂತಿಮ ಗುರಿ ಮಾನವೀಯತೆ ಎಂದು ನೆಚ್ಚಿದವರು ಅವರು.

ಕಾವ್ಯಾನಂದ ಎಂದಕೂಡಲೇ ಕನ್ನಡದ ಓದುಗರಿಗೆ ಥಟ್ಟೆಂದು ನೆನಪಾಗುವ ಕವಿತೆಗಳು ಎರಡು. ಒಂದು, 'ಹೊತ್ತಿತೋ ಹೊತ್ತಿತು ಕನ್ನಡದ ದೀಪ' ಎನ್ನುವ ಕನ್ನಡದ ಹಾಡು. ಇನ್ನೊಂದು 'ಮೊದಲು ಮಾನವನಾಗು' ಎನ್ನುವ ಮನುಷ್ಯತ್ವದ ಹಾಡು. ಇವೆರಡನ್ನೂ ಅವರ ಬದುಕು- ವ್ಯಕ್ತಿತ್ವದ ಎರಡು ಮುಖಗಳಾದ ಕನ್ನಡಪ್ರೇಮ ಹಾಗೂ ಮನುಷ್ಯಪ್ರೇಮದ ರೂಪಗಳಲ್ಲಿ ಕಾಣಬಹುದು.

*ಕಣ್ಣು ಕುಕ್ಕಿಸುವಂತೆ ದೇದೀಪ್ಯಮಾನ*
*ಜಾಜ್ವಲ್ಯ ಉಕ್ಕಿಸುವಂತೆ ಶೋಭಾಯಮಾನ*
*ಕನ್ನಡದ ಮನೆಯಾಗೇ ಜ್ಯೋತಿರ್ನಿಧಾನ*
*ಕನ್ನಡದ ಪ್ರಾಣ... ಕನ್ನಡದ ಮಾನ...*
*ಹೊತ್ತಿತೋ ಹೊತ್ತಿತು ಕನ್ನಡದ ದೀಪ*


ಸಿದ್ಧಯ್ಯ ಪುರಾಣಿಕ

ಪುರಾಣಿಕರ ಕನ್ನಡಪ್ರೇಮ ಭಾವುಕತೆಯ ನೆಲೆಗಷ್ಟನ್ನೇ ಕೊನೆಗೊಳ್ಳುವುದಿಲ್ಲ. 'ಉರಿವವರು ಬೇಕಿಹ್ನು ಇದಿರಗ್ನಿಯಾಗಿ / ಸುಡುವವರು ಬೇಕಿಹ್ನು ನಿದಾಘಿತ್ತಿಯಾಗಿ... / ಧರಿಸುವವರು ಬೇಕಿಹ್ನು ಸಿರಿಹಾಸಿಕೆಯಾಗಿ' ಎನ್ನುವ ವಾಸ್ತವವೂ ಅವರ ಕವಿತೆಯಲ್ಲಿದೆ. ಹಾಡಿದ್ದಷ್ಟೇ ಅಲ್ಲ - ಕನ್ನಡದ ಕಾಯಕದಲ್ಲಿ ಸ್ವತಃ ಬತ್ತಿಯಾದರು, ಎಣ್ಣೆಯಾದರು.

ಮಡಿದೀಪದ ಹಾಡಿನ ಹಿನ್ನೆಲೆಯಲ್ಲಿ ಕವಿಯ ಬದುಕನ್ನೂ ನೋಡಬೇಕು. ಬರಹಗಾರನಾಗಿ ಹಾಗೂ ನುಡಿಪ್ರೇಮಿಯಾಗಿ ಅವರದು 'ಮಾಸ್ತಿಮಾರ್ಗ'. ಮಾಸ್ತಿಯವರಿಗೆ ಪುರಾಣಿಕರ ಬಗ್ಗೆ ಅಪಾರಪ್ರೇಮ. ಕನ್ನಡದ ಕಟ್ಟಾಳುವಿನಂತೆ ಕಾಣಿಸುತ್ತಿದ್ದ ಹುಡುಗ ತಹಶೀಲ್ದಾರ್ ಹುದ್ದೆಗೆ ಆಯ್ಕೆಯಾದಾಗ, 'ಇದು ಕನ್ನಡಕ್ಕಾದ ನಷ್ಟ' ಎಂದು ಮಾಸ್ತಿಯವರು ಪ್ರತಿಕ್ರಿಯಿಸಿದ್ದರಂತೆ. ಅದಕ್ಕೆ ಪುರಾಣಿಕರು ನೀಡಿದ ಪ್ರತಿಕ್ರಿಯೆ: 'ನಾನು ನನ್ನ ಕೈಲಾದಷ್ಟು ಕನ್ನಡ ಸೇವೆ ಮಾಡಲಿಕ್ಕೆ ಸದಾ ಬದ್ಧ'. ಅದಕ್ಕೆ ತಕ್ಕನಾಗಿ ಅಧಿಕಾರಿಯಾಗಿದ್ದರೂ ಕನ್ನಡ ಚಳವಳಿಗಳಲ್ಲಿ ಗುರುತಿಸಿಕೊಂಡರು. ಗೋಕಾಕ್ ಚಳವಳಿ ಜೊತೆ ಗುರುತಿಸಿಕೊಂಡಿದ್ದರು. ಸರೋಜಿನಿ ಮಹಿಷಿ ಸಮಿತಿ, ಕನ್ನಡ ಗಡಿ ಸಮಿತಿಗಳಲ್ಲಿ ಕಾರ್ಯ ನಿರ್ವಹಿಸಿದರು. ಅವಕಾಶ ಸಿಕ್ಕಾಗಲೆಲ್ಲ 'ಕನ್ನಡದ ಪ್ರಾಣ-ಮಾನ'ಕ್ಕಾಗಿ ಸ್ಪಂದಿಸಿದರು.

*ಏನಾದರೂ ಆಗು*
*ನಿನ್ನೊಲವಿನಂತಾಗು*
*ಏನಾದರೂ ಸರಿಯೆ,*
*ಮೊದಲು ಮಾನವನಾಗು*

ಪುರಾಣಿಕರ ಮನುಷ್ಯತ್ವದ ಗೀತೆ ಕನ್ನಡಿಗರ ನಡುವೆ ಜನಪದ ಗೀತೆಯಂತೆ ಜೀವಂತವಾಗಿರುವ ಕವಿತೆ. ರಾಷ್ಟ್ರಪ್ರೇಮಿಯಾಗು, ಜನಪರವಾಗು, ಸಿರಿವಂತನಾಗು, ಎಡಪಂಥೀಯನಾಗು, ಬಲಪಂಥೀಯನಾಗು... ಹೀಗೆ ವಿವಿಧ ಗುಂಪುಗಳು 'ತಮ್ಮಂತಾಗು ಆಗು' ಎಂದು ಉಲಿದವರ ಬೆನ್ನುಬಿದ್ದಿರುವ ಸಂದರ್ಭದಲ್ಲಿ - 'ಏನಾದರೂ ಆಗು ಮೊದಲು ಮಾನವನಾಗು' ಎನ್ನುವ ಪುರಾಣಿಕರ ಮಾತು ಭಿನ್ನವಾಗಿ ಕಾಣಿಸುತ್ತದೆ. 'ಮನುಷ್ಯನಾಗು' ಎನ್ನುವ ಮಾತೇ ನಾವು ಏನೆಲ್ಲ ಆಗಿದ್ದೇವೆ ಎನ್ನುವುದನ್ನೂ ನಿಜವಾಗಿ ಆಗಬೇಕಾದುದೇನು ಎನ್ನುವುದನ್ನೂ ಸೂಚಿಸುವಂತಿದೆ.

ಪುರಾಣಿಕರ ಸಾಹಿತ್ಯ ಮತ್ತೊಂದು ಕವಲು ವಚನಗಳದು. 'ಸ್ವತಂತ್ರ ಧೀರ ಸಿದ್ಧೇಶ್ವರಾ' ಅಂಕಿತದಲ್ಲಿ ನೂರಾರು ವಚನಗಳನ್ನು ರಚಿಸಿದರು. ಆತ್ಮನಿರೀಕ್ಷಣೆ, ಸಮಾಜದ ವಿಮರ್ಶೆ, ಅನುಭವದ ಕೊಡುಕೊಳುವಿಕೆ ರೂಪದಲ್ಲಿ ಅವರ ವಚನಗಳನ್ನು ನೋಡಬಹುದು. 'ಸಾಯುವವರಿಗೂ ಶಾಸ್ತ್ರ ಹೇಳಿದರೇನು / ಸುಳ್ಳು ಹೇಳುವುದ ಬಿಡಲಿಲ್ಲ ಶಾಸ್ತ್ರಿಗಳ ಬಾಯಿ / ಸಾಯುವವರಿಗೆ ಪೂಜೆ ಮಾಡಿದರೇನು / ಭಕ್ತರ ಬೋಳಿಸುವುದ ಬಿಡಲಿಲ್ಲ ಪೂಜಾರಿಯ ಕೈ' ಎಂದು ಸಾಮಾಜಿಕ ವಿಮರ್ಶೆಗೆ ತೊಡಗುವ ಅವರು, 'ಹಲವು ಅರಸೊತ್ತಿಗೆಗಳು ಬಂದು ಹೋದರೇನು / ಹಳ್ಳಿಗರ ಕೂಗ ಕೇಳಲಿಲ್ಲ ದಿಲ್ಲಿಯ ಕಿವಿ' ಎಂದು ಹೇಳಲೂ ಹಿಂಜರಿಯಲಿಲ್ಲ. ಅಧಿಕಾರಿಯಾಗಿದ್ದುಕೊಂಡೂ ಪ್ರಭುತ್ವದ ಕುರಿತು ಎಚ್ಚರ- ವಿವೇಕವನ್ನು ಮೆಚ್ಚಾಗಿಸಿಕೊಳ್ಳದ ಮನೋಭಾವ ಅವರದು.

'ನಾನು ಹುಟ್ಟಿದ ಮೇಲೆ ತಾನೆ / ಅರ್ಥಕ್ಕೆ ಹುಟ್ಟು, ನಾದಕ್ಕೆ ವಾದ್ಯ / ಚಿತ್ರಕ್ಕೆ ಕುಂಚ, ಶಿಲ್ಪಕ್ಕೆ ಉಳಿ / ನಿನಗೆ ಭಕ್ತ ದೊರಕುದು?' ರಚನೆ ಕವಿಯ ಆತ್ಮವಿಶ್ವಾಸದ ಪ್ರತೀಕದಂತಿದೆ. 'ಫಲವಿತ್ತ ರೆಂಬೆ ಬಾಗುತ್ತದೆ / ಗೊನೆ ಹೊತ್ತ ಬಾಳೆ ಬಾಗುತ್ತದೆ / ತೆನೆ ಹೊತ್ತ ದಂಟು ಬಾಗುತ್ತದೆ / ಏನೇನೂ ಇಲ್ಲದುದು ಬೀಗುತ್ತದೆ ನೋಡಾ' ಎನ್ನುವ ರಚನೆ ಟೊಳ್ಳು- ಗಟ್ಟಿಯ ಕುರಿತು ಮಾತನಾಡುತ್ತದೆ.

ಜನಸಾಮಾನ್ಯರ ಬಗ್ಗೆ ಯೋಚಿಸುವ ಕವಿಯ ಕಣ್ಣಿಗೆ ಮಕ್ಕಳು ಕಾಣಿಸದಿರಲು ಸಾಧ್ಯವೆ? 'ಅಜ್ಜನ ಕೋಲಿದು ನನ್ನಯ ಕುದುರೆ / ಹೆಜ್ಜೆಗೆ ಹೆಜ್ಜೆಗೆ ಕುಣಿಯುವ ಕುದುರೆ / ಕಾಲಿಲ್ಲದೆಯೇ ನಡೆಯುವ ಕುದುರೆ / ಕಾಳಿಲ್ಲದೆಯೇ ಬದುಕುವ ಕುದುರೆ' ಎನ್ನುವ ಅವರ 'ನನ್ನ ಕುದುರೆ' ಪದ್ಯ ಕನ್ನಡ ಮಕ್ಕಳ ಜನಪ್ರಿಯ ಗೀತೆಗಳಲ್ಲೊಂದಾಗಿ ಹೊಸ ತಲೆಮಾರಿಗೂ ತಲುಪಿದೆ.

ಕವಿಯಾಗಿ ಕಾವ್ಯಾನಂದರು ತಮ್ಮನ್ನು ತಾವು ನೋಡಿಕೊಳ್ಳುವುದು ಹೀಗೆ: 'ಕಬ್ಬದಲಿ ಸವಿಯಾಗಿ ಅರ್ಥದಲಿ ಬೆಳಕಾಗಿ / ಬಾಳ ಭಿತ್ತಿಯಲ್ಲಿ ಬೆಳಕು ಸವಿ ಸಾಕಾಗಿ / ಬಾಳುವೆಯ ಸವಿ ಬೆಳಕ ಬರೆಯುವವ ಬೇಕಾಗಿ / ಸಾಯುತಿದ ಸೃಷ್ಟಿ ಸವಿಭವಿಯಾಗಿ ನಿಂದು / ಕವಿಯಾಗು ಕವಿಯಾಗು ಕವಿಯಾಗು ಎಂದು'. ಈ ಸಾಲುಗಳು ವೈಯಕ್ತಿಕ ಚೌಕಟ್ಟು ದಾಟಿ, ಸಾಹಿತ್ಯದ ಮೂಲಕ ಬದುಕಿನ ಅರ್ಥಪೂರ್ಣತೆಯ ಕುರಿತ ವಿವರಣೆಯಂತೆಯೂ ಇವೆ. 'ಬಾಳುವೆಯ ಸವಿ ಬೆಳಕ ಬರೆಯುವವ ಬೇಕಾಗಿ' ಎನ್ನುವ ಪುರಾಣಿಕರ ಉದ್ಗಾರ ಎಲ್ಲ ಕಾಲಗಳಲ್ಲೂ ಮನುಕುಲದ ಪ್ರಾರ್ಥನೆಯಂತೆ ಕಾಣಿಸುತ್ತಿದೆ.


ಕೊಡಗು ಜಿಲ್ಲಾಧಿಕಾರಿಯಾಗಿದ್ದ ಸಂದರ್ಭದಲ್ಲಿ ಕೊಡವರ ಪೋಷಾಕಿನಲ್ಲಿ ಸಿದ್ಧಯ್ಯ ಪುರಾಣಿಕ, ಗಿರಿಜಾದೇವಿ ದಂಪತಿ

## ಸಿದ್ಧಯ್ಯ ಪುರಾಣಿಕ

ಸಿದ್ಧಯ್ಯ ಪುರಾಣಿಕರದು (ಜೂನ್ 18, 1918- ಸೆ. 5, 1994) ರಾಯಚೂರು ಜಿಲ್ಲೆಯ (ಈಗಿನ ಕೊಪ್ಪಳ ಜಿಲ್ಲೆ) ಯಲಬುರ್ಗಿ ತಾಲ್ಲೂಕಿನ ದ್ಯಾಂಪುರ. ತಂದೆ ಕಲ್ಲಿನಾಥ ಶಾಸ್ತ್ರಿ, ತಾಯಿ ಚೆನ್ನಮ್ಮ, ಕಾವ್ಯಪ್ರೇಮಿಗಳ ಮನೆತನ. ಕಲ್ಲಿನಾಥ ಶಾಸ್ತ್ರಿ ಅವರಿಗೆ ಪುರಾಣ ಪ್ರವಚನಗಳಲ್ಲಿ ವಿಶೇಷ ಆಸಕ್ತಿ. ಪ್ರವಚನ ನೀಡುವುದು ಅವರ ವೃತ್ತಿಯೂ ಆಗಿತ್ತು. ಆ ಕಾರಣದಿಂದಲೇ ಕಾವ್ಯ- ವ್ಯಾಕರಣಗಳ ... ಕಾವ್ಯಪ್ರೇಮ ಮಗನಿಗೂ ಸಹಜವಾಗಿಯೇ ಒಲಿಯಿತು. ಪುರಾಣಿಕರ ತಾತ ಚೆನ್ನಕವಿಗಳಂತೂ ಷಟ್ಪದಿ ರಚನೆಯಲ್ಲಿ ನಿಸ್ಸೀಮರೆನ್ನಿಸಿಕೊಂಡಿದ್ದ ಕವಿ. ಕುಟುಂಬದಲ್ಲಿನ ಈ ಸಾಹಿತ್ಯದ ಹಿನ್ನೆಲೆ 'ಕಾವ್ಯಾನಂದ'ರ ವಿಕಸನಕ್ಕೆ ಕಾರಣವಾಯಿತು. ಹುಟ್ಟಿ ಬೆಳೆದ ಪರಿಸರದಲ್ಲಿದ್ದ ಉರ್ದುವಿನ ಪ್ರಾಬಲ್ಯದಿಂದಾಗಿ ಅವರು ಉರ್ದುವನ್ನೂ ಕಲಿತರು. ಕನ್ನಡಪ್ರೇಮವನ್ನೂ ಮೈಗೂಡಿಸಿಕೊಂಡರು.

1943ರಲ್ಲಿ ತಹಶೀಲ್ದಾರ್ ಆಗಿ ಉದ್ಯೋಗ ಪ್ರಾರಂಭಿಸಿದ ಅವರು ಕಾರ್ಮಿಕ ಇಲಾಖೆಯ ಆಯುಕ್ತರಾಗಿ 1972ರಲ್ಲಿ ನಿವೃತ್ತರಾದರು. ಮೂರು ದಶಕಗಳ ಸರ್ಕಾರಿ ಸೇವೆಯಲ್ಲಿ ಹಲವು ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿ, ಕೊಡಗು ಹಾಗೂ ಬೆಳಗಾವಿ ಜಿಲ್ಲೆಯ ಜಿಲ್ಲಾಧಿಕಾರಿಯಾಗಿಯೂ ಕೆಲಸ ಮಾಡಿದ್ದರು.

'ಜಯ ಕರ್ನಾಟಕ' ಪತ್ರಿಕೆಯಲ್ಲಿ ಮೊದಲ ಕವಿತೆ ಪ್ರಕಟವಾದಾಗ ಪುರಾಣಿಕರು ಊರಲ್ಲೆಲ್ಲ ಪತ್ರಿಕೆ ತೋರಿಸಿ ಸಂಭ್ರಮಿಸಿದ್ದರಂತೆ. ಅವರ ಚೊಚ್ಚಿಲ ಕವನಸಂಕಲನ 'ಜಲಪಾತ'ಕ್ಕೆ ಮುನ್ನುಡಿ ಬರೆದಿದ್ದ ದ.ರಾ. ಬೇಂದ್ರೆಯವರು, ತಮ್ಮ ಬರಹದಲ್ಲಿ ಸಮರ್ಥ ಕವಿಯೊಬ್ಬನನ್ನು ಗುರ್ತಿಸಿದ್ದರು. ಕನ್ನಡದ ಜೊತೆಗೆ ಇಂಗ್ಲಿಷ್, ಹಿಂದಿ, ಉರ್ದು, ಸಂಸ್ಕೃತ ಭಾಷೆಗಳಲ್ಲೂ ಅವರಿಗೆ ಜ್ಞಾನವಿತ್ತು.

ಪುರಾಣಿಕರ ಕೆಲವು ಪ್ರಮುಖ ಕೃತಿಗಳು: 'ಕರುಣಾ ಶ್ರಾವಣ', 'ಮಾನಸ ಸರೋವರ', 'ಮೊದಲು ಮಾನವನಾಗು', 'ಚರಗ' (ಕವನ ಸಂಕಲನಗಳು); 'ಗಿಲ್ ಗಿಲ್ ಗಿಲಗಚ್ಚಿ', 'ಚಿನ್ನ ಬಣ್ಣದ ಚಿಲುಮೆ', 'ತಿರುಗೆಲೆ ತಿರುಗೆಲೆ ತಿರುಗಾಯ್ಯಾಲೆ', 'ಗೇಗೇಗೇ' (ಮಕ್ಕಳ ಸಾಹಿತ್ಯ); 'ತುಷಾರ' (ಕಥಾ ಸಂಕಲನ), 'ತ್ರಿಭುವನ ಮಲ್ಲ' (ಕಾದಂಬರಿ), 'ನನ್ನ ನಿನ್ನೆಗಳೊಡನೆ ಕಣ್ಣಾಮುಚ್ಚಾಲೆ' (ಆತ್ಮಕಥನ), 'ವಚನೋದ್ಯಾನ', 'ವಚನ ನಂದನ', 'ವಚನಾರಾಮ' (ವಚನಗಳು).

ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮಾಳವಾಡ ಪ್ರಶಸ್ತಿ, ಭಾರತೀಯ ಭಾಷಾ ಪರಿಷತ್ತಿನ ದಿಲ್ಲಾ ಪ್ರಶಸ್ತಿ, ಕಲಬುರ್ಗಿಯಲ್ಲಿ ನಡೆದ 58ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ - ಇವು ಪುರಾಣಿಕರಿಗೆ ಸಂದ ಕೆಲವು ಗೌರವಗಳು.


ಶಂಕರ ಮೊಕಾಶಿ ಪುಣೇಕರ್, ಕುವೆಂಪು, ಹಾ.ಮಾ. ನಾಯಕರೊಂದಿಗೆ ಸಿದ್ಧಯ್ಯ ಪುರಾಣಿಕರು

ಚಿತ್ರಗಳು: ಪ್ರಜಾವಾಣಿ ಆರ್ಕೈವ್

## ಕಪಾಟು

'ಕಿಚನ್ ಕವಿತೆಗಳು'- ಅಡುಗೆ ಮನೆಯಲ್ಲಿ ಹುಟ್ಟಿ ಫೇಸ್‌ಬುಕ್‌ನಲ್ಲಿ ಬೆಳೆದ ಕವಿತೆಗಳ ಗುಚ್ಛ. ಪಾಕಶಾಲೆಯಲ್ಲಿ ಕೈಗೆ ಸಿಕ್ಕ, ಕಣ್ಣಿಗೆ ಬಿದ್ದ ಎಲ್ಲವನ್ನೂ ಎಳೆದು ತಂದು ಪ್ರೀತಿ, ನಿಟ್ಟುಸಿರು, ದುರಾಸೆ, ವಿರಹ, ಧ್ಯಾನ, ಬೇಸರ, ಬೇಗುದಿಗೆ ಬೆಸೆದಿದ್ದಾರೆ ಭಾರತಿ. 'ಹಳತಾದ ಕುಕ್ಕರ್ ಆರು ಬಾರಿ ಕೂಗಿದರೂ/ ಇತ್ತೀಚೆಗೆ ಬೇಳೆ ಬೇಯುವುದೇ ಇಲ್ಲ/ ಕುಕ್ಕರಿಗಾದರೆ ರಬ್ಬರ್ ಬದಲಿಸಬಹುದು/ ಹಳತಾದ ಸಂಬಂಧಗಳಿಗೇನು ಮಾಡುವುದು' ಎಂದು ಸೂಚ್ಯವಾಗಿ ಹೇಳುತ್ತಾರೆ. ಕಿಚನ್‌ನಲ್ಲಿನ ಚೌಪದಿಯ ಚೌಚೌ ಬಾತ್ ...


ಪು: 40
₹30

**ಕಿಚನ್ ಕವಿತೆಗಳು**
ಲೇ: ಭಾರತಿ ಬಿ.ವಿ.
ಪ್ರ: ಬಹುರೂಪಿ
ಸಂಜಯನಗರ
...

ವಿಶ್ವದ ವಿವಿಧ ದೇಶಗಳಲ್ಲಿ ಗಣಿತ ಕ್ಷೇತ್ರದಲ್ಲಿ ಅನನ್ಯ ಸಾಧನೆಗೈದು ಚರಿತ್ರೆಯಲ್ಲಿ ದಾಖಲಾಗದೇ ಮಿಂಚಿ ಮರೆಯಾಗಿ ಹೋದ ಗಣಿತ ತಾರೆಯರ ಬಗ್ಗೆ ಬರೆದಿರುವ ಪುಸ್ತಕ ಇದಾಗಿದೆ. ಈ ಕ್ಷೇತ್ರದಲ್ಲಿ ಅಸಾಧಾರಣ ಸಾಧನೆ ಮಾಡಿದ ಮಹಿಳೆಯರ ಹೆಗ್ಗುರುತುಗಳು ದೃಢವಾಗಿದ್ದರೂ ಲಿಂಗತಾರತಮ್ಯದ ಪರಿಣಾಮ ಅವುಗಳನ್ನು ಮರೆಯಲಾಗುತ್ತಿದೆ ಎನ್ನುವುದನ್ನು ಈ ಪುಸ್ತಕ ದಾಖಲಿಸುತ್ತದೆ. ಒಟ್ಟು ಹನ್ನೆರಡು ಗಣಿತಜ್ಞೆಯರ ಜೀವನ, ...




ಪು: 120
₹100

**ಗಣಿತ ವನಿತೆಯರು**
ಲೇ: ಮಲ್ಲಿಕಾರ್ಜುನ ಯಾಳವಾರ
ಡಾ.ಶಂಕರ ರಾ. ಕಂದಗಲ್ಲ
...

ಪ್ರಜಾವಾಣಿ ಭಾನುವಾರ • ಆಗಸ್ಟ್ 5, 2018
ಬೆಂಗಳೂರು ನಗರ/ರಾಜ್ಯ 3D

## ನಗರದಲ್ಲಿ ಇಂದು




ಡಾ.ಸಿದ್ದಯ್ಯ ಪುರಾಣಿಕ್ ಅವರ ಜನ್ಮಶತಮಾನೋತ್ಸವ, ಸಿದ್ದಯ್ಯ ಪುರಾಣಿಕ್ ಅವರ ಮಕ್ಕಳ ಪದ್ಯಗಳ 'ನನ್ನ ಕುದುರೆ' ಧ್ವನಿಸಾಂದ್ರಿಕೆ ಬಿಡುಗಡೆ: ಸಂಗೀತ ನಿರ್ದೇಶನ-ಎಚ್.ಫಲ್ಗುಣ, ಅತಿಥಿಗಳು- ಕವಿ ಡಾ.ಸಿದ್ದಲಿಂಗಯ್ಯ, ಸಂಗೀತ ನಿರ್ದೇಶಕ ಬಿ.ವಿ.ಶ್ರೀನಿವಾಸ್, ಸಿದ್ದಯ್ಯ ಪುರಾಣಿಕ್ ಅವರ ಪುತ್ರ ಪ್ರಸನ್ನಕುಮಾರ್ ಪುರಾಣಿಕ್, ಗಾಯನ-ಕೆ.ಎಸ್.ಸುರೇಖಾ, ಶ್ರೀರಕ್ಷಾ ಪ್ರಿಯರಾಮ್, ಸಮೂಹ ಗಾಯನ- ಸೃಜನ ಸಾಂಸ್ಕೃತಿಕ ಸಮೂಹದ ವಿದ್ಯಾರ್ಥಿಗಳಿಂದ, ಆಯೋಜನೆ- ಹೊಂಬಾಳೆ ಪ್ರತಿಭಾರಂಗ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ- ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ ರಸ್ತೆ, ಬೆಳಿಗ್ಗೆ-11

ಈ ಸಂಜೆ
ಶುಕ್ರವಾರ, 3 ಆಗಸ್ಟ್, 2018

# ಸಿದ್ದಯ್ಯ ಪುರಾಣಿಕರ ಶತಮಾನೋತ್ಸವ

ಬೆಂಗಳೂರು, ಆ.3-ವಚನಬ್ರಹ್ಮ ಕಾವ್ಯಾನಂದ, ಮಕ್ಕಳ ಸಾಹಿತಿ ಡಾ.ಸಿದ್ದಯ್ಯ ಪುರಾಣಿಕ ಅವರ ಜನ್ಮ ಶತಮಾನೋತ್ಸವ ಹಾಗೂ ಎಚ್.ಫಲ್ಗುಣ ಸಂಗೀತ ನಿರ್ದೇಶನದ ನನ್ನ ಕುದುರೆ-ಡಾ.ಸಿದ್ದಯ್ಯ ಪುರಾಣಿಕ ಮಕ್ಕಳ ಪದ್ಯಗಳ ಧ್ವನಿಸಾಂದ್ರಿಕೆ ಬಿಡುಗಡೆ ಸಮಾರಂಭವನ್ನು ಹೊಂಬಾಳೆ ಪ್ರತಿಭಾರಂಗ ಸಂಸ್ಥೆಯು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಆ.5 ರಂದು ಹಮ್ಮಿಕೊಂಡಿದೆ.

ಅಂದು ಬೆಳಗ್ಗೆ 11 ಗಂಟೆಗೆ ಬೆಂಗಳೂರಿನ ಕನ್ನಡ ಭವನದಲ್ಲಿರುವ ನಯನ ಸಭಾಂಗಣದಲ್ಲಿ ಹಿರಿಯ ಕವಿ ಡಾ.ಸಿದ್ದಲಿಗಯ್ಯ ಅವರು ಧ್ವನಿ ಸಾಂದ್ರಿಕೆ ಬಿಡುಗಡೆ ಮಾಡಿ ಸಿದ್ದಯ್ಯ ಪುರಾಣಿಕ ಅವರನ್ನು ಕುರಿತು ಮಾತನಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಗೀತ ನಿರ್ದೇಶಕ ಬಿ.ವಿ.ಶ್ರೀನಿವಾಸ್ ಹಾಗೂ ಡಾ.ಸಿದ್ದಯ್ಯ ಪುರಾಣಿಕ ಅವರ ಸುಪುತ್ರ ಪ್ರಸನ್ನಕುಮಾರ್ ಪುರಾಣಿಕ್ ಆಗಮಿಸಲಿದ್ದು, ಜಿ.ಪಿ.ರಾಮಣ್ಣ ಕಾರ್ಯಕ್ರಮ ಪ್ರಸ್ತುತ ಪಡಿಸಲಿದ್ದಾರೆ.

ಸುಗಮ ಸಂಗೀತ ಕ್ಷೇತ್ರದ ಪ್ರಸಿದ್ಧ ಗಾಯಕಿ ಕೆ.ಎಸ್.ಸುರೇಖಾ. ಶ್ರೀರಕ್ಷಾ ಪ್ರಿಯರಾಮ್, ವರ್ಷಾ ಸುರೇಶ್ ,ಪ್ರತಿಭಾ ಫಲ್ಗುಣ, ಸಹನಾ.ಎಂ, ಮಾನಸಿ ಧನಂಜಯ್ ಅವರು ಸಿದ್ದಯ್ಯ ಪುರಾಣಿಕ್ ಅವರ ಗೀತೆಗಳನ್ನು ಹಾಡಲಿದ್ದಾರೆ. ಸಮೂಹ ಗಾಯನದಲ್ಲಿ ಸೃಜನ ಸಾಂಸ್ಕೃತಿಕ ಸಮೂಹದ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ ಎಂದು ಹೊಂಬಾಳೆ ಸ್ಥಾಪಕ ಎಚ್.ಫಲ್ಗುಣ ತಿಳಿಸಿದ್ದಾರೆ.

Cityಬೀಟ್
ನಮಸ್ತೆ ಬೆಂಗಳೂರು
C 2
ಮಂಗಳವಾರ 7 ಆಗಸ್ಟ್ 2018
VIJAYAVANI » 7 AUGUST 2018

# ಬೆಂಗಳೂರಿನಲ್ಲೇ ಕಾವ್ಯಾನಂದರ ಜನ್ಮಶತಮಾನೋತ್ಸವ ಆಚರಣೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

'ಕಾವ್ಯಾನಂದ' ಕಾವ್ಯನಾಮದ ಧೀಮಂತ ಸಾಹಿತಿ ಡಾ.ಸಿದ್ದಯ್ಯ ಪುರಾಣಿಕ ಜನ್ಮ ಶತಮಾನೋತ್ಸವ ಆಚರಿಸಲು ಕೇಂದ್ರ ಸಾಹಿತ್ಯ ಅಕಾಡೆಮಿ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಹಿರಿಯ ಕವಿ ಸಿದ್ದಲಿಂಗಯ್ಯ ತಿಳಿಸಿದ್ದಾರೆ.

» **ಪುರಾಣಿಕರ ಮಕ್ಕಳ ಪದ್ಯಗಳ ಧ್ವನಿಸಾಂದ್ರಿಕೆ ಬಿಡುಗಡೆ**

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಹೊಂಬಾಳೆ ಪ್ರತಿಭಾರಂಗ ಕನ್ನಡ ಭವನದ ನಯನ ಸಭಾಂಗಣದಲ್ಲಿ ಆಯೋಜಿಸಿದ್ದ ಡಾ.ಸಿದ್ದಯ್ಯ ಪುರಾಣಿಕರ ಜನ್ಮಶತಮಾನೋತ್ಸವ ಹಾಗೂ ಎಚ್. ಫಲ್ಗುಣ ಸಂಗೀತ ನಿರ್ದೇಶನವಿರುವ ಸಿದ್ದಯ್ಯ ಪುರಾಣಿಕರ ಮಕ್ಕಳ ಪದ್ಯಗಳ ಧ್ವನಿಸಾಂದ್ರಿಕೆ 'ನನ್ನ ಕುದುರೆ' ಬಿಡುಗಡೆಗೊಳಿಸಿ ಮಾತನಾಡಿದರು. ಕರ್ನಾಟಕ ಕಂಡ ಶ್ರೇಷ್ಠ ವ್ಯಕ್ತಿಗಳಲ್ಲಿ ಸಿದ್ದಯ್ಯ ಪುರಾಣಿಕರೂ ಒಬ್ಬರು. ಕವಿ, ಮಾನವತಾವಾದಿ ಹಾಗೂ ಸತ್ವಶಾಲಿ ರಚನಾಕಾರರಾದ ಪುರಾಣಿಕರನ್ನು ಯಾರೂ ಮರೆಯಲು ಸಾಧ್ಯವಿಲ್ಲ. ಉನ್ನತ ಅಧಿಕಾರಿಯಾಗಿ ಕನ್ನಡದಪರ ಶ್ರಮಿಸಿದ್ದ ಅವರು, ಕನ್ನಡದ ಬಗ್ಗೆ ಒಲವು ಹೊಂದಿದ್ದರು ಎಂದರು.

ಸಿದ್ದಯ್ಯ ಪುರಾಣಿಕ ಅವರ ಪುತ್ರ ಪ್ರಸನ್ನ ಕುಮಾರ್ ಪುರಾಣಿಕ, ಸಂಗೀತ ನಿರ್ದೇಶಕ ಬಿ.ವಿ. ಶ್ರೀನಿವಾಸ್, ಸಂಗೀತ ನಿರ್ದೇಶಕ ಎಚ್. ಫಲ್ಗುಣ ಮತ್ತಿತರರು ಉಪಸ್ಥಿತರಿದ್ದರು.



ವಿಜಯವಾಣಿ ಚಿತ್ರ

ಸಿದ್ದಯ್ಯ ಪುರಾಣಿಕರ ಮಕ್ಕಳ ಪದ್ಯಗಳ 'ನನ್ನ ಕುದುರೆ' ಧ್ವನಿಸಾಂದ್ರಿಕೆಯನ್ನು ಹಿರಿಯ ಕವಿ ಸಿದ್ದಲಿಂಗಯ್ಯ ಬಿಡುಗಡೆ ಮಾಡಿದರು. ಎಚ್. ಫಲ್ಗುಣ ಮತ್ತಿತರರಿದ್ದರು.

## ಸಂಗೀತ ಪ್ರೀತಿ ಬೆಳೆಸಿದ ಫಲ್ಗುಣ: ಕವಿ ಸಿದ್ದಲಿಂಗಯ್ಯ



ಈ ಸಂಜೆ 05.08.2018



ನಗರದ ನಯನ ಸಭಾಂಗಣದಲ್ಲಿ ಇಂದು ವಚನ ಬ್ರಹ್ಮ ಡಾ. ಸಿದ್ದಯ್ಯ ಪುರಾಣಿಕರವರ ಜನ್ಮ ಶತಮಾನೋತ್ಸವ ಹಾಗೂ ಮಕ್ಕಳ ಪದ್ಯಗಳ ಧ್ವನಿ ಸಾಂದ್ರಿಕೆ ಬಿಡುಗಡೆ ಸಮಾರಂಭದಲ್ಲಿ ದಲಿತ ಕವಿ ಸಿದ್ದಲಿಂಗಯ್ಯ, ಸಂಗೀತ ನಿರ್ದೇಶಕ ವಿ.ವಿ. ಶ್ರೀನಿವಾಸ್, ಪ್ರಸನ್ನಕುಮಾರ್ ಇದ್ದಾರೆ.

ಸಂಜೆ ವಾಣಿ 05.08.2018

ವಿಶ್ವವಾಣಿ 06.08.2018

ಕವಿ ಡಾ. ಸಿದ್ದಲಿಂಗಯ್ಯ ಅವರಿಂದ 'ನನ್ನ ಕುದುರೆ' ಧ್ವನಿ ಸಾಂದ್ರಿಕೆ ಬಿಡುಗಡೆ

# ಸಿದ್ದಯ್ಯ ಪುರಾಣಿಕ್ ಜನ್ಮ ಶತಮಾನೋತ್ಸವ ಆಚರಣೆಗೆ ಕೇಂದ್ರ ಸರಕಾರ ಸಿದ್ಧತೆ



### ಗೋಕಾಕ್ ಚಳವಳಿಯಲ್ಲಿ ಭಾಗಿ

"ನನ್ನ ಕುದುರೆ" ಸಿಡಿ
ಬಿಡುಗಡೆ
5.8.2018

ವಿಜಯ ಕರ್ನಾಟಕ

ಸೋಮವಾರ, 6 ಆಗಸ್ಟ್ 2018 ನಮ್ಮ ಬೆಂಗಳೂರು

### ಡಾ. ಸಿದ್ದಲಿಂಗಯ್ಯ ಅವರಿಂದ ಮಾಹಿತಿ

# ಪುರಾಣಿಕರ ಜನ್ಮ ಶತಮಾನೋತ್ಸವ ಆಚರಣೆ

■ **ವಿಕ ಸುದ್ದಿಲೋಕ** ಬೆಂಗಳೂರು

ಮಕ್ಕಳ ಸಾಹಿತಿ, ವಚನಬ್ರಹ್ಮ ಸಿದ್ದಯ್ಯ ಪುರಾಣಿಕ್ ಅವರ ಜನ್ಮ ಶತಮಾನೋತ್ಸವ ಆಚರಿಸಲು ಕೇಂದ್ರ ಸಾಹಿತ್ಯ ಅಕಾಡೆಮಿ ಸಭೆಯಲ್ಲಿ ತೀರ್ಮಾನಿಸಲಾಗಿದ್ದು, ಅದಕ್ಕೆ ಅಗತ್ಯ ಪೂರ್ವ ತಯಾರಿ ನಡೆಸಲಾಗುತ್ತಿದೆ ಎಂದು ಕವಿ ಡಾ.ಸಿದ್ದಲಿಂಗಯ್ಯ ತಿಳಿಸಿದರು.

ಹೊಂಬಾಳೆ ಪ್ರತಿಭಾರಂಗ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಭಾನುವಾರ ಕನ್ನಡ ಭವನದಲ್ಲಿ ಹಮ್ಮಿಕೊಂಡಿದ್ದ ಡಾ. ಸಿದ್ದಯ್ಯ ಪುರಾಣಿಕ್ ಅವರ 'ಜನ್ಮ ಶತಮಾನೋತ್ಸವ' ಹಾಗೂ ಸಂಗೀತ ನಿರ್ದೇಶಕ ಎಚ್.ಪಲ್ಲುಗ್ಣ ಅವರ 'ನನ್ನ ಕುದುರೆ ಧ್ವನಿ ಸಾಂದ್ರಿಕೆ' ಬಿಡುಗಡೆ ಮಾಡಿ ಮಾತನಾಡಿದರು.

''ಸಿದ್ದಯ್ಯ ಪುರಾಣಿಕರು ಕರ್ನಾಟಕ ಕಂಡ ಶ್ರೇಷ್ಠ ವ್ಯಕ್ತಿ. ಕವಿ, ಮಾನವತಾವಾದಿ ಹಾಗೂ ತತ್ವಶಾಲಿ ರಚನಾಕಾರರಾದ ಅವರನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ. ಅವರ ಶತಮಾನೋತ್ಸವವನ್ನು ಆಚರಿಸಲು ಒಮ್ಮತದ ನಿರ್ಧಾರಕ್ಕೆ ಬರಲಾಗಿದೆ,'' ಎಂದು ಅವರು ಹೇಳಿದರು.

''ಇಂದು ಪ್ರತ್ಯೇಕ ಕರ್ನಾಟಕದ ಕೂಗು ಕೇಳಿ ಬಂದಿದೆ. ಆದರೆ, ಅಂದು ಹೈದರಾಬಾದ್ ಕರ್ನಾಟಕ ಉಳಿಯಲು ಪುರಾಣಿಕರು ಶ್ರಮಿಸಿದ್ದರು. ರವೀಂದ್ರ ಕಲಾಕ್ಷೇತ್ರ, ಕನ್ನಡ ಸಾಹಿತ್ಯ ಪರಿಷತ್ತು ನಿರ್ಮಾಣ, ಕಾವೇರಿ ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆಯ ಅಭಿವೃದ್ಧಿಯಲ್ಲಿ ಅವರ ಪಾತ್ರ ಮಹತ್ವದ್ದು'' ಎಂದರು.

ಪುರಾಣಿಕ್‌ರ ಪುತ್ರ ಪ್ರಸನ್ನ ಕುಮಾರ್ ಪುರಾಣಿಕ್ ಮಾತನಾಡಿ ''ತಂದೆ ಬರೆದಿರುವ ಮಕ್ಕಳ ಸಾಹಿತ್ಯದ ಕೆಲ ಕವನಗಳನ್ನು ಧ್ವನಿ ಸಾಂದ್ರಿಕೆ ಮಾಡಿ ಹೊರತರಲು ಎರಡು ವರ್ಷ ಬೇಕಾಯಿತು. ಮುಂದಿನ ದಿನಗಳಲ್ಲಿ ಅವರು ಬರೆದಿರುವ ಪುಸ್ತಕಗಳನ್ನು ಹಂತ- ಹಂತವಾಗಿ ಬಿಡುಗಡೆ ಮಾಡಲಾಗುವುದು,'' ಎಂದರು.

ಕಾರ್ಯಕ್ರಮದಲ್ಲಿ ಸಂಗೀತ ನಿರ್ದೇಶಕರಾದ ಬಿ.ವಿ.ಶ್ರೀನಿವಾಸ್, ಎಚ್.ಪಲ್ಲುಗ್ಣ ಉಪಸ್ಥಿತರಿದ್ದರು.



ಕವಿ ಡಾ.ಸಿದ್ದಲಿಂಗಯ್ಯ, ಸಂಗೀತ ನಿರ್ದೇಶಕ ಬಿ.ವಿ.ಶ್ರೀನಿವಾಸ್, ಪ್ರಸನ್ನಕುಮಾರ್ ಮಕ್ಕಳ ಹಾಡುಗಳ ಧ್ವನಿ ಮುದ್ರಿಕೆ ಬಿಡುಗಡೆಗೊಳಿಸಿದರು.

### ಮದ್ಯ ಹೋಗಲಿ, ಹಣ್ಣು ಇರಲಿ...

ಇಂದು ಹಾಲು, ಹಣ್ಣಿನ ಅಂಗಡಿ ಮಾಯವಾಗಿ ಎಲ್ಲೆಡೆ ಮದ್ಯಪಾನದ ಅಂಗಡಿ ತಲೆಯೆತ್ತಿವೆ. ಮದ್ಯಪಾನದಿಂದ ದೇಶದ ಯುವ ಜನತೆಯ ಹಾಳಾಗುತ್ತಿರುವ ಬಗ್ಗೆ ಪುರಾಣಿಕರು ಸಾಕಷ್ಟು ಬಾರಿ ಸಂದೇಶ ನೀಡಿದ್ದರು. ಕೈವಾರ ತಾತಯ್ಯರು ಸಹ ಹೆಂಡ ಕುಡಿಯುವ ಕಾಲ ಹೋಗಿ, ಬೆಣ್ಣೆ ತುಪ್ಪ ಮಜ್ಜಿಗೆ ಕುಡಿದು, ಹಣ್ಣು ತಿನ್ನುವ ಕಾಲ ಬರುತ್ತದೆ ಎಂದಿದ್ದರು. ಅದಕ್ಕಾಗಿ ನಾವು ಎದುರು ನೋಡುತ್ತಿದ್ದೇವೆ ಎಂದು ಕವಿ ಸಿದ್ದಲಿಂಗಯ್ಯ ನುಡಿದರು.

ಸಂಯುಕ್ತ ಕರ್ನಾಟಕ

ಸೋಮವಾರ, 06, ಆಗಸ್ಟ್, 2018,

# ಅನ್ಯಾಯ ವಿರುದ್ಧ ಸಾತ್ವಿಕ ಹೋರಾಟ

## ಮಕ್ಕಳ ಸಾಹಿತಿ ಡಾ.ಸಿದ್ದಯ್ಯ ಪುರಾಣಿಕರ ಸ್ಮರಣೆ



ಸಿದ್ಧಯ್ಯ ಪುರಾಣಿಕರ ಜನ್ಮಶತಮಾನೋತ್ಸವ ಕಾರ್ಯಕ್ರಮದಲ್ಲಿ ಕವಿ ಡಾ. ಸಿದ್ಧಲಿಂಗಯ್ಯ ಎಚ್.ಫಲ್ಗುಣ ಸಂಗೀತ ನಿರ್ದೇಶನದ 'ನನ್ನ ಕುದುರೆ' ಧ್ವನಿ ಸುರುಳಿ ಬಿಡುಗಡೆ ಮಾಡಿದರು. ಬಿ.ವಿ.ಶ್ರೀನಿವಾಸ್, ಪ್ರಸನ್ನ ಕುಮಾರ್ ಪುರಾಣಿಕ್ ಹಾಗೂ ಗಾಯಕಿಯರು ಉಪಸ್ಥಿತರಿದ್ದರು.

> ಇತ್ತೀಚಿಗೆ ನಡೆದ ಕೇಂದ್ರ ಸಾಹಿತ್ಯ ಅಕಾಡೆಮಿ ಸಭೆಯಲ್ಲಿ ಸಾಹಿತಿ ಸಿದ್ದಯ್ಯ ಪುರಾಣಿಕ್ ಅವರ ಜನ್ಮ ಶತಮಾನೋತ್ಸವ ಆಚರಿಸಲು ತೀರ್ಮಾನಿಸಲಾಗಿದ್ದು, ಪೂರ್ವ ತಯಾರಿ ನಡೆಸಲಾಗುತ್ತಿದೆ.
>
> –ಸಿದ್ದಲಿಂಗಯ್ಯ, ಕವಿ.

ಸಂ.ಕ.ಸಮಾಚಾರ ಬೆಂಗಳೂರು

ಮಕ್ಕಳ ಸಾಹಿತಿ ಡಾ.ಸಿದ್ದಯ್ಯ ಪುರಾಣಿಕ್ ಅವರು ಅನ್ಯಾಯಗಳ ವಿರುದ್ಧ ಹೋರಾಡಿದ್ದ ಸಾತ್ವಿಕ ವ್ಯಕ್ತಿ ಎಂದು ಕವಿ ಸಿದ್ದಲಿಂಗಯ್ಯ ಅಭಿಪ್ರಾಯಪಟ್ಟರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಹೊಂಬಾಳೆ ಪ್ರತಿಭಾರಂಗ ಸಹಯೋಗದಲ್ಲಿ ಕನ್ನಡಭವನದಲ್ಲಿ ನಡೆದ ಡಾ.ಸಿದ್ದಯ್ಯ ಪುರಾಣಿಕರ ಜನ್ಮ ಶತಮಾನೋತ್ಸವ ಹಾಗೂ ನನ್ನ ಕುದುರೆ ಧ್ವನಿ ಸಾಂದ್ರಿಕೆ ಬಿಡುಗಡೆ ಮಾಡಿ ಮಾತನಾಡಿದ ಅವರು, ಪುರಾಣಿಕರಿಗೆ ಸಾಹಿತ್ಯದ ಮೇಲೆ ಅಪಾರ ಒಲವಿತ್ತು. ಅಸಮಾನತೆ ಹಾಗೂ ಭ್ರಷ್ಟಾಚಾರ ಕಂಡಾಗ ಅವರಿಗೆ ಸಿಟ್ಟು ಶಿಖರ ಪ್ರಾಯವಾಗಿ ಹೆಚ್ಚಾಗುತಿತ್ತು. ಅವರು ಅನೇಕ ಅನ್ಯಾಯಗಳ ವಿರುದ್ಧ ಹೋರಾಡಿದ್ದ ಸಾತ್ವಿಕ ವ್ಯಕ್ತಿ.

ರವೀಂದ್ರ ಕಲಾಕ್ಷೇತ್ರ ಕಟ್ಟಲು ಇವರ ಪಾತ್ರ ಮಹತ್ವದ್ದು. ಅಲ್ಲದೇ, ಕಾವೇರಿ ಮತ್ತು ಕೃಷ್ಣ ಮೇಲ್ದಂಡೆ ಯೋಜನೆಯ ಅಭಿವೃದ್ಧಿಗೆ ಸಾಕಷ್ಟು ಸಲಹೆಗಳನ್ನು ನೀಡಿದ್ದಾರೆ ಎಂದರು.

ಸಿದ್ದಯ್ಯ ಅವರು ಅಧಿಕಾರದಲ್ಲಿದ್ದರೂ ಗೋಕಾಕ್ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದಲ್ಲದೆ ಡಾ. ಸರೋಜಿನಿ ಮಹಿಷಿ ಸಮಿತಿ, ಕನ್ನಡಗಡಿ ಸಮಿತಿ, ಕನ್ನಡ ಪ್ರಾಧಿಕಾರದ ಸದಸ್ಯರಾಗಿ ಕನ್ನಡದ ಹಿತ ಕಾಯುವಲ್ಲಿ ವಿಶೇಷ ಆಸಕ್ತಿವಹಿಸಿದ್ದರು.

ತಹಸೀಲ್ದಾರರಾಗಿ ಆಯ್ಕೆಗೊಂಡಾಗ ಮಾಸ್ತಿಯವರು ಕನ್ನಡಕ್ಕಾದ ನಷ್ಟ ಎಂದು ನುಡಿದಾಗ, ನಾನು ಕನ್ನಡದ ಕೈಬಿಡುವುದಿಲ್ಲ, ಕೈಲಾದಷ್ಟು ಸಾಹಿತ್ಯ ಸೇವೆ ಮಾಡುತ್ತೇನೆ ಎಂದು ಹೇಳಿ ಅದೇ ರೀತಿ ನಡೆದುಕೊಂಡಿದ್ದರು ಎಂದು ಹೇಳಿದರು.

ಸಿದ್ದಯ್ಯ ಪುರಾಣಿಕ್ ಅವರ ಪುತ್ರ ಪ್ರಸನ್ನ ಕುಮಾರ್ ಪುರಾಣಿಕ್ ಮಾತನಾಡಿ, ನನ್ನ ತಂದೆ ಅಧಿಕಾರದಲ್ಲಿದ್ದರೂ ಸಮಾಜದಲ್ಲಿನ ಅನಿಷ್ಟ ಪದ್ಧತಿಗಳ ವಿರುದ್ಧ ಹೋರಾಡುತ್ತಿದ್ದರು.

ಸಾಹಿತ್ಯ, ಮತ್ತು ಕನ್ನಡ ಭಾಷೆಯ ಮೇಲೆ ಇವರಿಗೆ ಅಪಾರ ಕಾಳಜಿ ಇತ್ತು. ಅವರು ಬರೆದಿರುವ ಮಕ್ಕಳ ಸಾಹಿತ್ಯದ ಕೆಲವೊಂದು ಕವನಗಳನ್ನು ಧ್ವನಿ ಸಾಂದ್ರಿಕೆಯಾಗಿ ಹೊರತರಲು ಎರಡು ವರ್ಷಗಳು ಬೇಕಾಯಿತು. ಅವರ ಬರೆದಿರುವ ಪುಸ್ತಕಗಳನ್ನು ಹಂತ ಹಂತವಾಗಿ ಬಿಡುಗಡೆ ಮಾಡಲಾಗುತ್ತದೆ ಎಂದು ತಿಳಿಸಿದರು.

ವಿಜಯವಾಣಿ

www.vijayavani.net
email: vihara@vijayavani.in

ಭಾನುವಾರ 17 ಜೂನ್ 2018

ನಂ. 1* ಕನ್ನಡ ದಿನಪತ್ರಿಕೆ

www.facebook.com/VIJAYAVANINEWS https://twitter.

ನಾಳೆ ಕಾವ್ಯಾನಂದರ ಜನ್ಮ ಶತಮಾನೋತ್ಸವ ದಿನ


'ಕಾವ್ಯಾನಂದ' ಎಂಬ ಅಂಕಿತದೊಂದಿಗೆ ವಚನ ಸಾಹಿತ್ಯ, ಕಾವ್ಯ, ನಾಟಕ, ಸಂಪಾದನೆ, ಕಥೆ, ಕಾದಂಬರಿ, ಮಕ್ಕಳ ಸಾಹಿತ್ಯ, ನಿಘಂಟು ಸಂಪಾದನೆ ಹೀಗೆ ಅನೇಕ ಪ್ರಕಾರಗಳನ್ನು ತಮ್ಮ ಸೃಜನಶೀಲತೆಗೆ ಬಳಸಿಕೊಂಡು, ಕನ್ನಡ ಬೆಳೆಸಿ, ಉಳಿಸಿ ಹೆಸರಾದವರು. ಐಎಎಸ್ ಅಧಿಕಾರಿ ಆಗಿದ್ದುಕೊಂಡೇ ಕನ್ನಡ ನಾಡಿನ ಅಗ್ರಗಣ್ಯ ಸಾಹಿತಿಯಾಗಿ ಬೆಳೆದವರು. ನಾಳೆ (ಜೂನ್ 18) ಅವರ ಜನ್ಮಶತಮಾನೋತ್ಸವ ದಿನ. ಈ ಹಿನ್ನೆಲೆಯಲ್ಲಿ ಅಕ್ಷರ ನೆನಪು.

# ಆಧುನಿಕ ವಚನಕಾರ ಸಿದ್ಧಯ್ಯ ಪುರಾಣಿಕ



ಡಾ. ಬಸವರಾಜ ಸಬರದ
ಪ್ರಾಧ್ಯಾಪಕರು, ಕಲಬುರಗಿ

ಆಧುನಿಕ ವಚನಕಾರರಲ್ಲಿ ಸಿದ್ಧಯ್ಯ ಪುರಾಣಿಕ ಹೆಸರು ತುಂಬ ವಿಶಿಷ್ಟವಾದುದು. ಸಿದ್ಧಯ್ಯ ಪುರಾಣಿಕರು ಕಾವ್ಯ-ಕಥೆ-ಕಾದಂಬರಿ-ನಾಟಕಗಳನ್ನು ರಚಿಸಿದ್ದರೂ, ವಿಮರ್ಶಕರು ಅವರನ್ನು ಗುರುತಿಸಿರುವುದು ಪ್ರಮುಖ ವಚನಕಾರರನ್ನಾಗಿ. ವಚನೋದ್ಯಾನ, ವಚನನಂದನ, ವಚನರಾಮ ಹೀಗೆ ಮೂರು ಬೃಹತ್ ವಚನ ಸಂಪುಟಗಳನ್ನು ಪ್ರಕಟಿಸಿರುವ ಕಾವ್ಯಾನಂದರ ವಿಶಿಷ್ಟ ಕೊಡುಗೆ ಇರುವುದೇ ವಚನಗಳಲ್ಲಿ. ಇವರು ಸುಮಾರು 1500ಕ್ಕೂ ಹೆಚ್ಚು ವಚನಗಳನ್ನು ರಚಿಸಿದ್ದಾರೆ. ಇವರದು ಸಮನ್ವಯ ದೃಷ್ಟಿ. ಪರಂಪರೆಯನ್ನು ಸಂಪೂರ್ಣವಾಗಿ ವಿರೋಧಿಸದೆ, ಆಧುನಿಕತೆಯನ್ನೂ ಯಥಾವತ್ತಾಗಿ ಸ್ವೀಕರಿಸದೆ ಎರಡರಲ್ಲಿರುವ ಉತ್ತಮಾಂಶಗಳನ್ನು ಹೀರಿಕೊಂಡು ಬದುಕುವ ಬರೆಯುವ ಆಶಯ ಕಾವ್ಯಾನಂದರದಾಗಿದೆ. ಪುರಾಣಿಕರ ವಚನಗಳಲ್ಲಿ ವಸ್ತು ವೈವಿಧ್ಯವಿದೆ. ಜೀವ-ದೇವ ಸಂಬಂಧ ಪರಿಕಲ್ಪನೆ ಕೇವಲ ಆಸ್ತಿಕರಲ್ಲಿ ಮಾತ್ರ ಸಾಧ್ಯ. ಪುರಾಣಿಕರು ಆಸ್ತಿಕರು. ಆದರೆ ಸಂಪ್ರದಾಯ ವಿರೋಧಿಗಳು. ಈ ವಿಷಯದಲ್ಲಿ ಪುರಾಣಿಕರ ಮೇಲೆ ಹನ್ನೆರಡನೇ ಶತಮಾನದ ಶರಣರ ಪ್ರಭಾವ ದಟ್ಟವಾಗಿದೆ.



ಸಿದ್ಧಯ್ಯ ಪುರಾಣಿಕ

V ನೇ ತ್ರಟಿಕೆ

ಪ್ರಜಾವಾಣಿ ಶುಕ್ರವಾರ • ಜೂನ್ 8, 2018

# ಮಕ್ಕಳಿಗೆ ಕಥೆ ಹೇಳುವುದು ಕಷ್ಟ: ವಿವೇಕ ಶಾನಭಾಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಕ್ಕಳಿಗೆ ಕಥೆ ಹೇಳುವುದು ಕಷ್ಟ. ಅವರು ಹತ್ತಾರು ಪ್ರಶ್ನೆಗಳನ್ನು ಕೇಳುತ್ತಾರೆ. ಸಾವಿನ ನಂತರ ಏನಾಗುತ್ತದೆ, ಯಾಕೆ ಹೀಗೆ ಆಗುತ್ತಿದೆ ಎಂದು ಪ್ರಶ್ನೆಗಳ ಸುರಿಮಳೆ ಸುರಿಸುತ್ತಾರೆ. ನನ್ನ ಮಕ್ಕಳು ಅವರ ಅಜ್ಜಿಯ ಕಥೆಯನ್ನೇ ಇಷ್ಟಪಡುತ್ತಾರೆ’ ಎಂದು ಲೇಖಕ ವಿವೇಕ ಶಾನಭಾಗ ಹೇಳಿದರು.

ಪಂಜೆ ಮಂಗೇಶರಾಯ, ಕುವೆಂಪು, ಜಿ.ಪಿ ರಾಜರತ್ನಂ, ಸಿದ್ಧಯ್ಯ ಪುರಾಣಿಕ, ಬಿ.ಕೆ ತಿರುಮಲಮ್ಮ ಅವರ ಆಯ್ದ ಕವನಗಳ ಸಂಗ್ರಹ ‘ಮಕ್ಕಳ ಜನಪ್ರಿಯ ಸಾಹಿತ್ಯ’ ಪುಸ್ತಕವನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

‘ಮಕ್ಕಳು ಇಷ್ಟಪಟ್ಟು ಕೇಳುವಂತೆ ಕಥೆ ಹೇಳುವುದು ಎಲ್ಲರಿಗೂ ಸಾಧ್ಯವಿಲ್ಲ. ನಾನು ಕೂಡ ನನ್ನ ಮಕ್ಕಳಿಗೆ ಕಥೆ ಹೇಳುತ್ತೇನೆ. ಇಲ್ಲಿ ನಾನು ಐದು ಮಾನದಂಡಗಳನ್ನು ಇಟ್ಟುಕೊಂಡು ಕವಿತೆಗಳನ್ನು ಆಯ್ಕೆ ಮಾಡಿದ್ದೇನೆ. ನನ್ನ ಮುಖ್ಯ ಉದ್ದೇಶ ಇದ್ದದ್ದು ಕವಿತೆಗಳ ಮೂಲಕ ಮಕ್ಕಳು ಕನ್ನಡದಲ್ಲಿ ಓದಿ, ಬರೆಯುವಂತೆ ಆಕರ್ಷಿತರಾಗಬೇಕು, ಹಾಡಿನ ಮೂಲಕ ಹೇಳುವಂತಿರಬೇಕು, ಅನುಭವ ಪ್ರಪಂಚವನ್ನು ವಿಸ್ತರಿಸಬೇಕು, ಪ್ರಪಂಚ ಜ್ಞಾನ ಹೆಚ್ಚಬೇಕು, ಕನ್ನಡದ ಕೆಲವು ಲೇಖಕರ ಪರಿಚಯ ಅವರಿಗೆ ಆಗಬೇಕು’ ಎಂದರು.

‘ಪುಸ್ತಕದ ಮೇಲೆ ಅತ್ಯುತ್ತಮ ಚಿತ್ರಗಳನ್ನು ಬಿಡಿಸಲಾಗಿದೆ. ಇವು ಮಕ್ಕಳನ್ನು ಹೆಚ್ಚು ಆಕರ್ಷಿಸಲಿವೆ’ ಎಂದರು.

‘ಒಂದು ಶೀರ್ಷಿಕೆ ಅಡಿಯಲ್ಲಿ ಐದು ಚಿಕ್ಕ ಪುಸ್ತಕಗಳನ್ನು ಪ್ರಕಟಿಸಲಾಗಿದೆ. ಪ್ರಮುಖ ಐದು ಲೇಖಕರ ಕವಿತೆಗಳು ಇದರಲ್ಲಿ ಇವೆ’ ಎಂದು ಲೇಖಕಿ ಕಾಂಚನ್ ಬ್ಯಾನರ್ಜಿ ಹೇಳಿದರು.

‘ನಮ್ಮ ಪ್ರಕಟಣೆಯ ಬಹುತೇಕ ಪುಸ್ತಕಗಳು ವೆಬ್‌ಸೈಟ್‌ನಲ್ಲಿ (www.prathambooks.org) ದೊರೆಯುತ್ತವೆ’ ಎಂದು ಪ್ರಥಮ್ ಬುಕ್ಸ್‌ನ ಸೂಜಿ ಸಿಂಗ್ ಹೇಳಿದರು.



ಪ್ರಥಮ್ ಬುಕ್ಸ್ ಆಯೋಜಿಸಿದ್ದ ‘ಮಕ್ಕಳ ಜನಪ್ರಿಯ ಸಾಹಿತ್ಯ’ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಕಾಂಚನ್ ಬ್ಯಾನರ್ಜಿ ಅವರು ಪುಸ್ತಕ ಅನಾವರಣಗೊಳಿಸಿ ಟಾಟಾ ಟ್ರಸ್ಟ್‌ನ ಉಷಾ ಮುಕುಂದ್ ಅವರಿಗೆ ಹಸ್ತಾಂತರಿಸಿದರು (ಎಡದಿಂದ) ಸೂಜಿ ಸಿಂಗ್ ಹಾಗೂ ಲೇಖಕ ವಿವೇಕ ಶಾನಭಾಗ ಇದ್ದಾರೆ ಪ್ರಜಾವಾಣಿ ಚಿತ್ರ

## ‘ಮರೆಯದ ಕ್ಷಣ’

‘ನಾನು ಹಾಗೂ ನನ್ನ ತಂದೆ, ಪ್ರೊ ಡಿ.ಕೆ ಭೀಮಸೇನ್‌ರಾವ್ ಅವರ ಮನೆಗೆ ಹೋಗಿದ್ದೆವು. ನಮ್ಮ ತಂದೆಗೆ(ಸಿದ್ಧಯ್ಯ ಪುರಾಣಿಕ) ಅವರು ಮಕ್ಕಳ ಕವನಗಳನ್ನು ಬರೆದುಕೊಡಲೇಬೇಕು ಎಂದು ಪಟ್ಟುಹಿಡಿದರು. ಆಗ ಕೆಲವೇ ನಿಮಿಷಗಳಲ್ಲಿ ಅವರು 2 ಕವನ ರಚಿಸಿದರು. ಅವು ‘ಅಜ್ಜನ ಕೋಲಿದು ನನ್ನಯ ಕುದುರೆ’, ‘ಕರಡಿಯ ತಕ ತಕ ಕುಣಿಸುತ ಬಂದ’ ಇವು ಈಗಲೂ ಜನಪ್ರಿಯ ಕವಿತೆಗಳಾಗಿ ಉಳಿದಿವೆ ’ ಎಂದು ಸಿದ್ಧಯ್ಯ ಪುರಾಣಿಕ ಅವರ ಮಗಳು ವಿಜಯಾ ನಂದೀಶ್ವರ್ ನೆನಪು ಮಾಡಿಕೊಂಡರು.

ಮೊದಲ ಪುಟದಿಂದ...

# ಆಧುನಿಕ ವಚನಕಾರ ಸಿದ್ಧಯ್ಯ ಪುರಾಣಿಕ

ಜೀವ-ದೇವ ಸಂಬಂಧಗಳ ವಿಷಯ ಕುರಿತು ಮಾತನಾಡುವಾಗಲೆಲ್ಲ, ಆತ್ಮ ನಿವೇದನೆ ಪ್ರಮುಖ ಪಾತ್ರ ವಹಿಸುತ್ತದೆ. ಪುರಾಣಿಕರ ದೇವ ಎಲ್ಲಿಯೋ ಇರುವಂಥವನಲ್ಲ. ಆತ ಅವರೊಳಗಡೆಯೇ ಇದ್ದಾನೆ. ಈ ವಿಚಾರಕ್ಕೆ ಸಂಬಂಧಿಸಿದಂತೆ ತುಂಬ ಕುತೂಹಲಕಾರಿಯಾದ ಸಂಗತಿಗಳನ್ನವರು ತಿಳಿಸಿದ್ದಾರೆ.

ಶಬ್ದ ಹುಟ್ಟಿದ ನಂತರವಲ್ಲವೆ ಅರ್ಥ ಹುಟ್ಟುವುದು! ವಾದ್ಯ ಹುಟ್ಟಿದ ನಂತರವಲ್ಲವೆ ನಾದ ಕೇಳಿಸುವುದು! ಕುಂಚ ಹುಟ್ಟಿದ ನಂತರವಲ್ಲವೆ ಚಿತ್ರ ಕಾಣಿಸುವುದು! ಹೀಗೆ ಈ ಉಪಮಾಮಾಲೆಯನ್ನು ಬೆಳೆಸುತ್ತಾರೆ.

**ನಾನು ಹುಟ್ಟಿದ ಮೇಲೆ ತಾನೆ**
**ಅರ್ಥಕ್ಕೆ ಶಬ್ದ, ನಾದಕ್ಕೆ ವಾದ್ಯ**
**ಚಿತ್ರಕ್ಕೆ ಕುಂಚ, ಶಿಲ್ಪಕ್ಕೆ ಉಳಿ**
**ನಿನಗೆ ಭಕ್ತ ದೊರೆತುದು?**

ತಮ್ಮ ಹುಟ್ಟಿಗೆ ದೇವನೇ ಕಾರಣವೆಂದು ಉಳಿದ ಆಸ್ತಿಕರೆಲ್ಲ ಭಾವಿಸಿದರೆ, ನಾನು ಹುಟ್ಟಿದ ನಂತರವೇ ದೇವನ ಅಸ್ತಿತ್ವವೆಂದು ಪುರಾಣಿಕರು ಹೇಳುತ್ತಾರೆ. ಉಳಿದ ಆಸ್ತಿಕರಿಗೂ ಪುರಾಣಿಕರಿಗೂ ಇರುವ ವ್ಯತ್ಯಾಸ ಇಲ್ಲಿಯೇ; ಶಿವನಿಗಿಂತ ಶಿವಶರಣ ಮುಖ್ಯ ಎನ್ನುವ ಶರಣರ ಆಶಯ ಇಲ್ಲಿ ವ್ಯಕ್ತವಾಗಿದೆ. ಹಾಗೆ ನೋಡಿದರೆ ಇದು ನಾಸ್ತಿಕವಾದದ ಪ್ರಾರಂಭದ ಪರಿಕಲ್ಪನೆಯೇ ಆಗಿದೆ. ನಾನಿದ್ದರೆ ಜಗತ್ತು ಎಂದು ನಾಸ್ತಿಕರು ಹೇಳುತ್ತಾರೆ. ಅದನ್ನೇ ಪುರಾಣಿಕರು ಉಪಮೆಗಳ ಮೂಲಕ ಇಲ್ಲಿ ಹೇಳಿದ್ದಾರೆ. ಅಂದರೆ ಪುರಾಣಿಕರು ಆಸ್ತಿಕನೆಂದು ಹೇಳಿಕೊಳ್ಳುತ್ತಲೇ ನಾಸ್ತಿಕ ವಿಚಾರಗಳನ್ನೂ ಪ್ರತಿಪಾದಿಸುತ್ತಾರೆ.

ನವೋದಯ ಸಂದರ್ಭದಲ್ಲಿ ಬರವಣಿಗೆ ಪ್ರಾರಂಭಿಸಿದ ಸಿದ್ಧಯ್ಯ ಪುರಾಣಿಕರ ವಚನಗಳಲ್ಲಿ ಸಹಜವಾಗಿಯೇ ಪ್ರಕೃತಿಯ ಬಗೆಗೆ ಪ್ರಸ್ತಾಪವಿದೆ. ಕಾವ್ಯಾನಂದರು, ನಿಸರ್ಗ ಮಾತೆಯನ್ನು ಕುರಿತು, ಆಕೆಯ ಅಂತಃಕರಣವನ್ನು ಕುರಿತು ತಮ್ಮ ಅನೇಕ ವಚನಗಳಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇಂದು ಮನುಷ್ಯ ಹಸಿರು ಕಾಡು ಕಡಿದು, ಕಾಂಕ್ರೀಟು ಕಾಡು ನಿರ್ಮಿಸುತ್ತಿದ್ದಾನೆ. ಇದನ್ನು ಪುರಾಣಿಕರು ಬಹಳ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ವೈಜ್ಞಾನಿಕ ಆವಿಷ್ಕಾರಗಳು ನಡೆದಂತೆಲ್ಲ ಸಮಾಜ ವ್ಯವಸ್ಥೆಯಲ್ಲಿ ಸಹಜವಾಗಿಯೇ ಬದಲಾವಣೆಯ ಗಾಳಿ ಬೀರುತ್ತದೆ. ಹೀಗೆ ಬದಲಾವಣೆಗೊಳ್ಳುವ ಪ್ರಕ್ರಿಯೆಯಲ್ಲಿ ಒಂದರ ಸ್ಥಾನದಲ್ಲಿ ಮತ್ತೊಂದು ಆಕ್ರಮಿಸಿಕೊಳ್ಳುತ್ತದೆ. ಬದಲಾವಣೆ ಅನಿವಾರ್ಯವೆಂದು ಒಪ್ಪಿಕೊಂಡರೂ ಹೊಸದನ್ನು ಅಪ್ಪಿಕೊಂಡರೂ ಕಳೆದುಹೋಗುತ್ತಿರುವ ಹಳೆಯದರ ಬಗೆಗೆ ಹಳಹಳಿಯೆನಿಸುತ್ತದೆ. ಅದನ್ನು ಕವಿ, ತರ್ಕಬದ್ಧವಾಗಿ ಹೇಳಿದ್ದಾರೆ.



**ವಿದ್ಯೆ ಬಂತು, ವಿನಯ ಹೋಯ್ತು**
**ಬುದ್ಧಿ ಬಂತು, ಶ್ರದ್ಧೆ ಹೋಯ್ತು**
**ಸಮೃದ್ಧಿ ಬಂತು, ಸಂಸ್ಕೃತಿ ಹೋಯ್ತು**
**ವಿಜ್ಞಾನ ಬಂತು, ಸಮಾಧಾನ ಹೋಯ್ತು**
**ಶರೀರ ಸ್ವಾಸ್ಥ್ಯ ಬಂತು, ಚಿತ್ತ ಸ್ವಾಸ್ಥ್ಯ ಹೋಯ್ತು**
**ದೀರ್ಘಾಯುಷ್ಯ ಬಂತು, ಜೀವನ ಸ್ವಾರಸ್ಯ ಹೋಯ್ತು**
**ಬೋಧನೆ ಬಂತು, ಸಾಧನೆ ಹೋಯ್ತು**
**ಮಾತು ಬಂತು, ಕೃತಿ ಹೋಯ್ತು**
**ಸ್ವಾತಂತ್ರ್ಯ ಬಂತು, ಸೌಜನ್ಯ ಹೋಯ್ತು**

**ಸತಿ-ಪತಿ ಭಾವ:** ಸತಿ-ಪತಿ ಭಾವ ಹನ್ನೆರಡನೇ ಶತಮಾನದ ಶರಣರ ಮಹತ್ವದ ಪರಿಕಲ್ಪನೆ. ಲೌಕಿಕದ ಮೂಲಕ ಅಲೌಕಿಕವನ್ನೂ ಗುರುತಿಸುವ ಪ್ರಯತ್ನಗಳನ್ನವರು ಮಾಡಿದರು. ಇದೇ ಆದರ್ಶವನ್ನು ಒಪ್ಪಿಕೊಂಡ ಪುರಾಣಿಕರ ವಚನಗಳಲ್ಲಿ ಸತಿ-ಪತಿ ಭಾವದ ಆಶಯವಿರುವ ಅನೇಕ ರಚನೆಗಳಿವೆ. ಪುರಾಣಿಕರು ಪ್ರೇಮ-ವಿರಹದ ಭಾವನೆಗಳನ್ನು ಈ ಸತಿಪತಿ ಭಾವದ ಚೌಕಟ್ಟಿನಲ್ಲಿಯೇ ವಿಸ್ತರಿಸಿದ್ದಾರೆ. ಸ್ವತಂತ್ರಧೀರ ಸಿದ್ಧೇಶ್ವರ ಈ ಕವಿಯ ಪ್ರಿಯಕರ. ಬಸವಣ್ಣನವರ ಸತಿಪತಿ ಭಾವದ ವಚನಗಳ ನೇರ ಪ್ರಭಾವವನ್ನು ಇಲ್ಲಿ ಕಾಣಬಹುದಾಗಿದೆ.

'ನಲ್ಲ ಬರುವನೆಂಬ ಸಿಹಿ ಸುದ್ದಿ ಬಂದಿದೆ ಗೆಳತಿ, ನಂಬಲೆ ನಂಬದಿರಲೆ?' ಎಂಬಂತಹ ಸಾಲುಗಳಲ್ಲಿರುವ ತೀವ್ರತೆ ಹಾಗೂ ಕುತೂಹಲ ಗಮನಿಸುವಂತಿವೆ. ಯಾರಿಗಾಗಿ ಮಿಂದು ಮುಡಿಯಲಿ? ಯಾರಿಗಾಗಿ ಸಿರಿಗಂಧವನ್ನು ಸವರಿಕೊಳ್ಳಲಿ? ಎಂಬಂತಹ ನುಡಿಗಳು ಅಕ್ಕಮಹಾದೇವಿಯ ರಚನೆಗಳನ್ನು ನೆನಪಿಸುತ್ತವೆ. ಪುರಾಣಿಕರ ಕಾವ್ಯದ ಅನನ್ಯತೆಯನ್ನು ಇಂತಹ ವಚನಗಳು ಹಿಡಿದಿಟ್ಟಿವೆ. ಪ್ರೀತಿ ಅನಂತವಾದುದು; ಅದರ ಅನಂತತೆಯನ್ನು ಗುರುತಿಸುವಲ್ಲಿ ಪುರಾಣಿಕರು ಯಶಸ್ವಿಯಾಗಿದ್ದಾರೆ.

ಪ್ರೀತಿ ಮತ್ತು ನೀತಿಯನ್ನು ಅವರು ಕಸಿ ಮಾಡಿ ಕಟ್ಟುತ್ತಾರೆ. ಅವರ ದೃಷ್ಟಿಯಲ್ಲಿ ನಾಲ್ಕಕ್ಷರಗಳು ಚತುರಕ್ಷರೀ ಮಂತ್ರವಾಗಿ ಕಾಣಿಸುತ್ತವೆ. ನೀತಿಯೆಂಬುದು ನಿಯಮಗಳ ಭಾರದಿಂದ, ಅವಾಸ್ತವಗಳ ಅಸಹಜತೆಯಿಂದ ಕೂಡಿರಬಾರದು ಅದು ಪ್ರೀತಿಯ ರಸದಲ್ಲಿ ಬೆಳೆದು ನಿಲ್ಲಬೇಕೆಂದವರು ಹೇಳುತ್ತಾರೆ. ಪ್ರೀತಿಸುವ ಹೃದಯವೊಂದಿದ್ದರೆ ಎಲ್ಲ ಇದ್ದ ಹಾಗೆ, ಅದಿಲ್ಲದಿದ್ದರೆ ಎಲ್ಲ ಇದ್ದೂ ಇಲ್ಲದಂತಯ್ಯಾ! ಎಂಬ ಅವರ ವಚನಗಳ ಸಾಲುಗಳಲ್ಲಿ ಪ್ರೀತಿಯ ಮಹತ್ವವೆಂತಹದೆಂಬುದನ್ನು ಸ್ಪಷ್ಟಪಡಿಸಿದ್ದಾರೆ.

# ಕನ್ನಡ ಕಹಳೆಯೂದಿದರು...

ರಾಘವೇಂದ್ರ ದಂಡಿನ್

**'ಇದುವರೆಗೆ ನೀ ತುಳಿದೆ ಮಣ್ಣನ್ನು**
**ಇನ್ನೇನು ಮಣ್ಣು ತುಳಿಯಲಿದೆ ನಿನ್ನನ್ನು...'**

ಅನುಭಾವ ಸಾಹಿತ್ಯದ ಈ ಎರಡು ಸಾಲುಗಳು ಸಾಕು; ಬದುಕಿನ ವಾಸ್ತವ ದರ್ಶನ ಮಾಡಿಸಲು. 'ಕಲ್ಲೋಲ ಮಾಲೆ' ಎಂಬ ಅನುಭಾವ ಗೀತೆಗಳ ಕೃತಿಯಲ್ಲಿ ಸರಳ ಶಬ್ದಗಳ ಮೂಲಕ ಜೀವನದ ಕಟು ಸತ್ಯವನ್ನು ದಾಖಲಿಸಿ, ತನ್ಮೂಲಕ ಸಹೃದಯಿ ಓದುಗನಿಗೆ ಸೂಕ್ತ ಸಂದೇಶ ನೀಡಿದವರು ಡಾ. ಸಿದ್ಧಯ್ಯ ಪುರಾಣಿಕ ಅವರು. ಸರಳ ಶಬ್ದಗಳು, ಸಾದಾ ವಾಕ್ಯಗಳು ಅವರ ಬರಹದ ವೈಶಿಷ್ಟ್ಯ. ಆದರೆ, ಅವು ಕೊಡುವ ಸಂದೇಶ ಮಾತ್ರ ಅನನ್ಯ. ಸಾಹಿತ್ಯದ ಬಹುತೇಕ ಪ್ರಕಾರಗಳಲ್ಲಿ ಕೃಷಿ ಮಾಡಿ, ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಕನ್ನಡವನ್ನು ಕಟ್ಟಿ, ಬೆಳೆಸಿದ ಕೀರ್ತಿ ಡಾ. ಸಿದ್ಧಯ್ಯ ಪುರಾಣಿಕರಿಗೆ ಸಲ್ಲುತ್ತದೆ.

ಅಮಲ್ದಾರರಾಗಿ ವೃತ್ತಿ ಬದುಕನ್ನು ಆರಂಭಿಸಿದ ಸಿದ್ಧಯ್ಯ ಪುರಾಣಿಕರು 1943ರಲ್ಲಿ ತಹಸೀಲ್ದಾರರಾಗಿ ಆಯ್ಕೆಯಾಗಿ, ಡೆಪ್ಯೂಟಿ ಕಲೆಕ್ಟರ್, ಅಧೀನ ಕಾರ್ಯದರ್ಶಿ, ಉಪಕಾರ್ಯದರ್ಶಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ಮುಖ್ಯಾಧಿಕಾರಿ, ಜಿಲ್ಲಾಧಿಕಾರಿ, ಸಾರಿಗೆ ಆಯುಕ್ತ, ಕಾರ್ಮಿಕ ಆಯುಕ್ತ ಹೀಗೆ ವಿವಿಧ ಹುದ್ದೆಗಳನ್ನು ಅಲಂಕರಿಸಿದ್ದರು. ವೃತ್ತಿ ಬದುಕಿನ ಭಾಗವಾಗಿ ಹೈದರಾಬಾದ್ ಕರ್ನಾಟಕದಲ್ಲಿದ್ದಾಗ (ಈಶಾನ್ಯ ಕರ್ನಾಟಕ) ಅವರು ಕನ್ನಡಕ್ಕಾಗಿ ಮಾಡಿದ ಕೆಲಸ, ಉರ್ದು, ತೆಲುಗು, ಮರಾಠಿ ಭಾಷೆಗಳೇ ಮುನ್ನೆಲೆಯಲ್ಲಿದ್ದ ಕಾಲದಲ್ಲಿ ಕನ್ನಡಕ್ಕಾಗಿ ದುಡಿದ ಪರಿ ಅಮೋಘವಾದದ್ದು. ವಿಪುಲ ಮತ್ತು ವೈವಿಧ್ಯಮಯವಾದ ಸಾಹಿತ್ಯವನ್ನು ಕನ್ನಡ ನಾಡಿಗೆ ಕೊಟ್ಟಿರುವ ಸಿದ್ಧಯ್ಯ ಪುರಾಣಿಕರು ವೃತ್ತಿಯಿಂದ ಅಧಿಕಾರಿಯಾಗಿದ್ದರೂ ಪ್ರವೃತ್ತಿಯಿಂದ ಪ್ರಕಾಂಡ ಸಾಹಿತಿಯಾಗಿ ಹೊರಹೊಮ್ಮಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ತಮ್ಮದೇ ಆದ ಕೊಡುಗೆ ನೀಡಿರುವ ಅವರು, ಭಾರತವೀರ, ಭಿನ್ನನೂಪುರ, ರಜತ ರೇಖೆ, ಆತ್ಮಾರ್ಪಣೆ ನಾಟಕಗಳನ್ನು ರಚಿಸಿದ್ದಾರೆ. ಗೇಹ ನಾಟಕಗಳು ಎಂಬ ನಾಟಕಗಳನ್ನೂ ರಚಿಸಿ ಗಮನ ಸೆಳೆದಿದ್ದಾರೆ. 'ಭಾರತವೀರ' ನಾಟಕ ರಚನೆಯಾಗಿದ್ದು ಭಾರತದ ಮೇಲೆ ಚೀನಾ ದಾಳಿ ಮಾಡಿದಾಗ ಎಂಬುದು ಗಮನಾರ್ಹ.



ಕೊಪ್ಪಳದ ಯಲಬುರ್ಗಾ ತಾಲೂಕಿನ ದ್ಯಾಂಪುರದಲ್ಲಿರುವ ಸಿದ್ಧಯ್ಯ ಪುರಾಣಿಕ ಅವರ ಮನೆ.

ಪ್ರತಿ ರಚನೆಯಲ್ಲೂ ಮೊನಚಾದ ಸಾಲುಗಳು ಕಾವ್ಯಾನಂದರ ಕವಿತ್ವದ ವೈಖರಿ. ಇವರ 'ಮೊದಲು ಮಾನವನಾಗು...' ಕವನ ಪಡೆದ ಪ್ರಸಿದ್ಧಿ ಅಷ್ಟಿಷ್ಟಲ್ಲ. ಪ್ರತಿ ಮನೆಯ ಪ್ರತಿ ಮನವ ಮುಟ್ಟಿದ ಗೀತೆ ಅದು. ಸಂಗೀತಗಾರರ ಕಛೇರಿಯಲ್ಲಿ ಈ ಗೀತೆಗೊಂದು ಅವಕಾಶ ಇದ್ದೇ ಇರುತ್ತಿತ್ತು. ಈಗಲೂ ಇದೆ. ಜಾನಪದ ಗಾರುಡಿಗ ಬಾಳಪ್ಪ ಹುಕ್ಕೇರಿ ಕಂಠ ಸಿರಿಯಲ್ಲಿ ಈ ಗೀತೆಯನ್ನು ಕೇಳಲು ಕನ್ನಡಿಗರು ಹಾತೊರೆಯುತ್ತಿದ್ದರು.

**'ಮಾನವರು ಕೆಟ್ಟಾರು ಮಾನವತೆ ಉಳಿದೀತು**
**ಕವಿ ದೇಹ ಬಿಟ್ಟಾನು ಕವಿತೆಯುಳಿದೀತು...'**

ಎಂಬ ಸಾಲುಗಳಲ್ಲಿ ದಟ್ಟವಾದ ಆಶಾವಾದ ಕಂಡುಬರುತ್ತದೆ. ಸ್ವತಂತ್ರ ಧೀರ ಸಿದ್ಧೇಶ್ವರಾ ಎಂಬ ಅಂಕಿತದೊಂದಿಗೆ ಪುರಾಣಿಕರು ರಚಿಸಿದ ವಚನಗಳು ಇಂದಿಗೂ ದಾರಿದೀಪ.

Anant Nag sheds light on the rise of young talent in Sandalwood. P4



# Classics for kids back in print

Five books by literary giants such as Kuvempu and Panje Mangesha Rao are available again, thanks to a non-profit publisher





(From left) Himanshu Giri, CEO, Suzanne Singh, chairperson, Kanchan Bannerjee, trustee (all from Pratham Books), Usha Mukunda, consultant, Tata Trusts, and writer Vivek Shanbhag at the book launch at the Ritz Carlton last Friday.

Five books that Kannada literary giants wrote for children are available again, thanks to a Bengaluru-based publisher.


Pratham Books, a non-profit publisher, launched the books at the Ritz-Carlton recently.

The books are: Panje Mangesh Rao's 'Thenkana Gaaliyaata' (Play of the Southern Wind), Kuvempu's 'Chandra Matthu Kamanabillu Kavanagalu' (Moon and Rainbow Poems), G P Rajarathnam's 'Paapa Matthu Peepi Kavanagalu' (Child and Bugle Poems), Dr Siddaiah Puranik's 'Nanna Kudure' (My Horse) and B K Tirumalamma's 'Haaru-Beelu Kavanagalu' (Fly and Fall Poems).




Well-known Kannada writer Vivek Shanbhag, who has curated the collection, told Metrolife the books connect experience and language through the Kannada imagination.

"G P Rajarathnam's 'Namma Maneyalondu Sanna Papaviruvudu' (The Small Child in Our House). Each child wants another child to play with at its house. When you read this poem to a child, it understands the experience and connects with it," says Shanbhag.




The poems also introduce children to new things and appeal to their senses.

"Look at Panje Magesh Rao's 'Thenkana Gaaliyaata' (Play of the Southern Wind), you can feel the force of the wind," he says.

Once Shanbhag had selected the books to be translated, the publishers got artists to start working on the illustrations.

The illustrations are by B G Gujjarappa, Satya Krishna Prakash, Proity Roy, Kalyani Naravane, and Adrija Ghosh.

Shanbhag, whose novel Ghachar Ghochar is being translated into languages across the world, says the children's books project took a year from inception to execution.

"A poem should be an experience. You cannot explain a poem. Through these poems, we want to introduce today's children to classic Kannada writers and encourage them to read their other works," he adds.




Suzanne Singh, chairperson of Pratham Books, says, "We must recognise the contribution of literature in regional languages to our country's rich cultural heritage. There are some works that stand the test of time and continue to be relevant in every generation. By presenting the poems in a way that will appeal to this new generation of young readers, we hope to do our part in keeping the classics alive."

Vijaya Nandeeshwar, Siddaiah Puranik' s daughter, recalls, "When my father was working in Hyderabad, his friend Prof D K Bhimasen Rao of Osmania University, asked him to write some poems for children. Within a short time, my father wrote two poems – 'Ajjana Kolidu Nannaya Kudure' and 'Karadiya Taka Taka Kunisutha Banda' – which remain hugely popular even today."




The Parag initiative of the Tata Trust has partnered with Pratham Books to bring out these classics. Each book is priced Rs 40, and the set at Rs 200.

You can order the books on www.prathambooks.org. Click on 'Latest deals'. The other links, such as 'New releases' don't get you to the Kannada releases.

**S N Deepak**



ಕನ್ನಡಪ್ರಭ 03
ಭಾನುವಾರ 20.11.2016

ಸೃಜನಶೀಲ ಲೋಕದ ವಿಹಾರ
CREATIVE CIRCUIT

ಭಾನುಪ್ರಭ

ಪುಸ್ತಕ ಪರಿಚಯ


# ಬಾಲ್ಯವನ್ನು ನೆನಪಿಸುವ ಮುದ್ದಾದ ಸಾಹಿತ್ಯ

• ಸಂಕೇತ್ ಗುರುದತ್

ಕಾವ್ಯಾನಂದರಾಗಿ ಜನಪ್ರಿಯರಾಗಿದ್ದ ಸಿದ್ದಯ್ಯ ಪುರಾಣಿಕ್ ಅವರು ಕನ್ನಡಕ್ಕೆ ವಿಶಿಷ್ಟ ಸಾಹಿತ್ಯವನ್ನು ನೀಡಿದ ಲೇಖಕರು. ಇಂದಿಗೂ ಮೆಲುಕು ಹಾಕುವ ಮಕ್ಕಳ ಪದ್ಯ, ಚೆಂದದ ಕತೆಗಳನ್ನು ನೀಡಿದ್ದಾರೆ. ಅವರು ಮಕ್ಕಳಿಗಾಗಿ ಬರೆದ ಪದ್ಯ, ಕಿರು ನಾಟಕ, ಕತೆಗಳನ್ನು ಈಗ ಸಮಗ್ರ ರೂಪದಲ್ಲಿ ಪರಿಷ್ಕೃತ ಆವೃತ್ತಿಯನ್ನು ಅವರ ಪುತ್ರ ಹೊರತಂದಿದ್ದಾರೆ. 'ಸಮಗ್ರ ಮಕ್ಕಳ ಸಾಹಿತ್ಯ' ಹೆಸರಿನಲ್ಲಿ ಪ್ರಕಟವಾಗಿರುವ ಈ ಕೃತಿ ಈ ಕಾಲದ ಮಕ್ಕಳಿಗೆ ಭಿನ್ನ ಓದನ್ನು ನೀಡುತ್ತದೆ.

ಪುಸ್ತಕವನ್ನು ಎಂಟು ಭಾಗಗಳನ್ನಾಗಿಸಿ ಆರು ಭಾಗಗಳಲ್ಲಿ ಮಕ್ಕಳನ್ನು ರಂಜಿಸುವ, ಬುದ್ಧಿಯನ್ನು ಚುರುಕುಗೊಳಿಸುವ, ಕುಣಿದು ಕುಣಿಸುವಂತೆ ಮಾಡುವ, ಮಕ್ಕಳ ಮುಗ್ಧಮನಸ್ಸಿನ ಯಕ್ಷಪ್ರಶ್ನೆಗಳಿಗೂ ಉತ್ತರಿಸುವ, ಕನ್ನಡ ನಾಡು ನುಡಿ ಹಾಗೂ ದೇಶ ಪ್ರೇಮವನ್ನು ಮೂಡಿಸುವ ಹಾಗೂ ಇಡಿಯನ್ನು ಹಿಡಿಯಲ್ಲಿ ತೆರೆದಿಟ್ಟು, ಸುಲಲಿತವಾಗಿ ಬಿಡಿಸಿಟ್ಟು ಪ್ರಾಸ ಬದ್ಧವಾಗಿ ಹೇಳಿದ್ದಾರೆ. ಹಾಡಲು ಅನುವು ಮಾಡಿಕೊಟ್ಟಿದ್ದಾರೆ.

ತುಪ್ಪದ ರೊಟ್ಟಿಗೆ ಗೇ ಗೇ ಗೇ ಭಾಗದಲ್ಲಿನ ಮೊದಲ ಪದ್ಯ 'ನನ್ನ ಕುದುರೆ' ಆಗಿನ ಮಕ್ಕಳಿಂದ ಈಗಿನ ಮಕ್ಕಳವರೆಗೂ ಮನಮಾತಾದ 'ಅಜ್ಜನ ಕೋಲಿದು ನನ್ನಯ ಕುದುರೆ ಹೆಜ್ಜೆಗೆ ಹೆಜ್ಜೆಗೆ ಕುಣಿಯುವ ಕುದುರೆ' ಪದ್ಯವಾಗಿದೆ. ಇದರಲ್ಲಿನ 'ಕಾಲಿಲ್ಲದೆಯೇ ನಡೆಯುವ ಕುದುರೆ, ಕೂಳಿಲ್ಲದೆಯೇ ಬದುಕುವ ಕುದುರೆ' ಅರ್ಥ ಪೂರ್ಣ ಸಾಲಗಿದೆ. ಹೊರನೋಟಕ್ಕೆ 'ಕೋಲಿಗಷ್ಟೆ' ಹೇಳುತ್ತಾ ಹೋದರು ಅದರ ಒಳ ಅರ್ಥವು ನಮ್ಮ ನಿಮ್ಮಗಳ ಬದುಕಿನ ಒಳಗನ್ನು ಬಟಾಬಯಲು ಮಾಡುವಂತಿದೆ.



ಪುಸ್ತಕದ ಶೀರ್ಷಿಕೆ: ಸಮಗ್ರ ಮಕ್ಕಳ ಸಾಹಿತ್ಯ
ಲೇಖಕರು: ಡಾ ಸಿದ್ದಯ್ಯ ಪುರಾಣಿಕ (ಕಾವ್ಯಾನಂದ)
ಪ್ರಕಾಶಕರು: ಶ್ರೀಗಿರಿ ಪ್ರಕಾಶನ, ಬೆಂಗಳೂರು
ಪುಟಗಳು: 198 ಬೆಲೆ: ರು. 200/-

'ಅ ಆ ಇ ಈ ಗೀತೆ'ಯು ಸುಲಭದಲ್ಲಿ ವರ್ಣಮಾಲೆಯನ್ನು ಪರಿಚಯಿಸಿದೆ. 'ಸಿದ್ದಿ ದ್ದಿ ಬಾವಾ' ದಲ್ಲಿನ ಕರಡಿಯ ಕುಣಿತದ ಚಿತ್ರಣ ಸೊಗಸಾಗಿದೆ. 'ಮಂಗಣ್ಣನ' ಪದ್ಯದಲ್ಲಿನ 'ಆ ಜಲಧಿಯನೆ ಜಿಗಿದ ಹನುಮನುದಿಸಿದ ನಾಡು' ಸಾಲು, ಮಂಗ ಮನಸ್ಸು ಮಾಡಿದರೆ ಏನೆಲ್ಲ ಸಾಧಿಸಬಲ್ಲ ಎಂಬುದನ್ನೂ, ರಾಮಾಯಣದ ಎಳೆಯನ್ನೂ ಹಾಗೂ ಹನುಮ ನಮ್ಮವ ಎಂಬೆಲ್ಲವನ್ನು ಒಂದೇ ಸಾಲಿನಲ್ಲಿ ಸಾರಿದ್ದಾರೆ. ಅದೇ ಕವಿಗೆ ಇರಬೇಕಾದ ಶಕ್ತಿ ಎನ್ನಲಡ್ಡಿಯಿಲ್ಲ.

'ಕೊಡು ಖಡ್ಗವ ಕೈಗೆ' ಯಲ್ಲಿ ಪಲ್ಲವಿಯು ಸ್ವಲ್ಪ ಖಡಕ್ ಆದರೂ ಮುಂದಿನ ಸಾಲುಗಳಲ್ಲಿ ಇತಿಹಾಸವನ್ನು ಸರಳವಾಗಿ ತಿಳಿಸಿದ್ದಾರೆ. 'ಮೀರುವೆನು' ಪದ್ಯಕ್ಕೆ 'ಆನೆಯನ್ನೇ ಅನಾಮತ್ತಾಗಿ ಎತ್ತಿ ಹಿಡಿದ ಬಾಲಕನ ಚಿತ್ರವು ಪದ್ಯದಲ್ಲಿ ಹೇಳಲಾಗದ್ದನ್ನೆಲ್ಲ ಒಂದೇ ಚಿತ್ರದಲ್ಲಿ ಕಲಾವಿದ ಎಚ್ ಎಸ್ ಮೋನಪ್ಪ ನಿರೂಪಿಸಿದ್ದಾರೆ. ಎಲ್ಲೆಡೆಯೂ ಸಂದರ್ಭಕ್ಕೆ ತಕ್ಕಂತೆ ಸಾಂದರ್ಭಿಕ ಚಿತ್ರಗಳನ್ನು ಚೆಂದವಾಗಿಯೇ ಚಿತ್ರಿಸಿದ್ದಾರೆ.


ಮುವತ್ತು ಪುಟಗಳಷ್ಟಿರುವ 'ನ್ಯಾಯ ನಿರ್ಣಯ' ಮಕ್ಕಳ ನಾಟಕವು ನೀತಿ ಹೇಳಲು ರಚಿಸಿದ್ದಂತೆ ಇದೆ. ಆಯಾಯ ಪ್ರಸಂಗಕ್ಕೆ ಪ್ರಾಸಬದ್ಧವಾದ ಹಾಡುಗಳನ್ನು ಜೋಡಿಸಿದ್ದು ಉತ್ತಮ ಪ್ರಕ್ರಿಯೆ. ಆದರೆ ದೃಶ್ಯಗಳಲ್ಲಿ ಬರುವ ಸಂಭಾಷಣೆಗಳು ಉದ್ದುದ್ದ ಇವೆ. ಅವನ್ನು ತುಂಡ್ಕಾಕಿದ್ದರೆ ಚೆನ್ನಾಗಿರೋದು. ಮಕ್ಕಳ ನಾಟಕಗಳಲ್ಲಿ ಮಾತಿಗಿಂತ ಹಾವಭಾವ, ಅಂಗವಿನ್ಯಾಸ ಹಾಗೂ ರಂಗ ಚಟುವಟಿಕೆಗೆ ಪ್ರಮುಖ್ಯತೆ ಕೊಡಬೇಕಿತ್ತು.

'ಮಕ್ಕಳ ಲೋಕ ಸಂಚಾರ'ವು ಈ ಭಾಗದಲ್ಲಿ ವಾಲ್ಟ್ ಡಿಸ್ನಿ, ಪ್ರಕೃತಿಯ ಅದ್ಭುತಗಳಾದ ಲೂರೇ ಗುಹೆಗಳು, ಗ್ರಾಂಡ್ ಕ್ಯಾನಾನ್‌ಗಳನ್ನು ಪರಿಚಯಿಸುತ್ತದೆ. ಬರವಣಿಗೆಯ ಮೂಲಕ ವಿಶ್ವ ಪರ್ಯಟನೆಯನ್ನು ಕಟ್ಟಿಕೊಡುವ ಪ್ರಯತ್ನವಾಗಿದೆ. ಅಲ್ಲದೇ ಅದೇ ದಾರಿಯನ್ನು 'ಸರ್ವರ ಕವಿ ಸರ್ವಜ್ಞ' ಕೂಡ ತುಳಿಯುತ್ತದೆ. ಇಲ್ಲಿ ಸರ್ವಜ್ಞನ ಪದಗಳಷ್ಟೆ ಒತ್ತು ಕೊಟ್ಟು ಅವುಗಳಲ್ಲಿ ಆಯ್ದವುಗಳನ್ನು ಇಲ್ಲಿ ಕೊಡಲಾಗಿದೆ. ಒಟ್ಟಾಗಿ ಮಕ್ಕಳ ಮನಸ್ಸು ಹದಗೊಳಿಸಿ ಅದರಲ್ಲಿ ತಿಳುವಳಿಕೆಯ ಸಾರವನ್ನು ಸುರಿದು ಅವರನ್ನು ಸುಜ್ಞಾನ ಮೂರ್ತಿಗಳನ್ನಾಗಿಸುವತ್ತ ಈ ಕೃತಿಯು ತೊಡಗಿಸಿಕೊಂಡಿದೆ ಎನ್ನಲಡ್ಡಿಯಿಲ್ಲ.

ಪ್ರಜಾವಾಣಿ

ಮುಕ್ತಛಂದ | ಅನುಸಂಧಾನ • ಭಾನುವಾರ • ಸೆಪ್ಟೆಂಬರ್ 25, 2016

## ಮೊದಲ ಓದು




ಪುಟ:198
ಬೆಲೆ:₹ 200


**ಡಾ. ಸಿದ್ಧಯ್ಯ ಪುರಾಣಿಕರ (ಕಾವ್ಯಾನಂದ)**
**ಸಮಗ್ರ ಮಕ್ಕಳ ಸಾಹಿತ್ಯ**
ಪ್ರ: ಶ್ರೀಗಿರಿ ಪ್ರಕಾಶನ,
'ಶ್ರೀಗಿರಿ' 4/5ಎ, ಅಲಿ ಅಸ್ಕರ್ ರಸ್ತೆ,
ಬೆಂಗಳೂರು– 560052

'ಕಾವ್ಯಾನಂದ' ಎಂಬ ಕಾವ್ಯನಾಮದಲ್ಲಿ ಬರೆಯುತ್ತಿದ್ದ ಕನ್ನಡ ಸಾಹಿತಿ ಸಿದ್ಧಯ್ಯ ಪುರಾಣಿಕರು ಶಿಶುಸಾಹಿತ್ಯವನ್ನು ಬರೆದು ಹಾಡಿನ ರುಚಿಯನ್ನು ಮಕ್ಕಳಿಗೂ ಹತ್ತಿಸಿದವರು. ಮಕ್ಕಳಿಗೂ ಹೊಸಲೋಕದ ದರ್ಶನ ಮಾಡಿಸಬೇಕು, ಅವರಲ್ಲಿ ಕನ್ನಡ ಭಾಷೆಯ ಬಗ್ಗೆ ಪ್ರೀತಿ ಬೆಳೆಸಬೇಕು ಎಂಬ ಬದ್ಧತೆ ಇದ್ದ ಸಾಹಿತಿಗಳ ತಲೆಮಾರಿಗೆ ಸೇರಿದವರಾದ ಪುರಾಣಿಕರು ಬರೆದ ಎಲ್ಲ ಶಿಶುಸಾಹಿತ್ಯವನ್ನು ಅವರ ಮಕ್ಕಳು ಇದೀಗ ಒಂದೆಡೆ ತಂದಿದ್ದಾರೆ. ಪುರಾಣಿಕರು ಅವರ ಕಾಲದ ಮಕ್ಕಳಿಗೆ ಬರೆದ ಕವಿತೆಗಳು, ಕಿರುನಾಟಕಗಳು, ಸರ್ವಜ್ಞ ಕವಿಯ ಪರಿಚಯ ಮಾಡಿಕೊಡುವ ಬರಹ, ಜಗತ್ತಿನ ಕೆಲವು ಅಚ್ಚರಿದಾಯಕ ಸ್ಥಳಗಳ ಬಗ್ಗೆ ಬರೆದ ಅವರ ಬರಹಗಳು ಇಲ್ಲಿ ಜಾಗ ಪಡೆದಿವೆ.

ಮಕ್ಕಳ ಕುತೂಹಲ, ಲೋಕದ ಕುರಿತ ವಿಸ್ಮಯ, ಬೆರಗು ಪುರಾಣಿಕರ ಶಿಶುಸಾಹಿತ್ಯದ ವಸ್ತು. 'ಅಕ್ಕನು ಮಾತ್ರ ಪಂಚಮಿಗೊಮ್ಮೆ/ ಅತ್ತಿಗೆಯಾದರೂ ಇಲ್ಲೇ ಗಟ್ಟಿ–/ ಯಾಕಮ್ಮ? ... ಇಂಗ್ಲಿಷ್ ಇಲ್ಲಿ ಮೂರೂ ಹೊತ್ತು/ ಕನ್ನಡ ಮಾತ್ರ ಆಗಾಗ–/ ಯಾಕಮ್ಮ? / ನಿನ್ನ ಪ್ರೀತಿಯು ನಾಲ್ಕೂ ಹೊತ್ತು/ ಅಪ್ಪನ ಪ್ರೀತಿಯು ಎಂದೋ ಒಮ್ಮೆ–/ ಯಾಕಮ್ಮ?' (ಪು.97) ಎನ್ನುವ 'ಯಾಕಮ್ಮ?' ಕವಿತೆ ಮನೆಯನ್ನು ಮಗು ತನ್ನದೇ ಕಣ್ಣುಗಳಲ್ಲಿ ಲೋಕವನ್ನು ಕಾಣುವುದನ್ನು, ಬದುಕಿನ ತಿಳಿವಳಿಕೆಯನ್ನು ಕೆಲವೇ ಸಾಲುಗಳಲ್ಲಿ ಮನಗಾಣಿಸುತ್ತದೆ. ಭಾಷೆಯ ನಾದ, ಲಯ, ಛಂದಸ್ಸು, ನುಡಿಗಟ್ಟನ್ನು ಮಕ್ಕಳಿಗೆ ಪರಿಚಯಿಸುವ ಇಲ್ಲಿನ ಕವಿತೆಗಳು ಮಕ್ಕಳಲ್ಲಿ ರಮ್ಯ ಲೋಕವೊಂದನ್ನು ಸೃಷ್ಟಿಸುತ್ತವೆ.

ಕಲಾವಿದ ಮೋನಪ್ಪ ಅವರ ರೇಖಾಚಿತ್ರಗಳು ಆ ಲೋಕಕ್ಕೆ ತಮ್ಮದೇ ರಂಗನ್ನು–ಗುಂಗನ್ನು ಸೇರಿಸಿವೆ. ಹೊಸ ವಿನ್ಯಾಸ ಹಾಗೂ ರೇಖೆಗಳೊಂದಿಗೆ ರೂಪುಗೊಂಡಿರುವ ಹಳೆಯ ಕವಿತೆಗಳು ಹೊಸ ಕಾಲದ ಮಕ್ಕಳನ್ನು ಓದಲು–ಹಾಡಲು ಆಹ್ವಾನಿಸುವಂತಿವೆ.

**ಗಾಂಧಿ ಭವನದಲ್ಲಿ 9 ರಂದು ಶ್ರೀ ಸಾಯಿ ಲೀಲಾಮೃತ ಕೃತಿ ಬಿಡುಗಡೆ**



ಶ್ರೀ ಶಿರಡಿ ಸಾಯಿಬಾಬಾ 100ನೇ ವರ್ಷದ ಸಮಾಧಿ ಮಹೋತ್ಸವದ ಪ್ರಯುಕ್ತ ಶ್ರೀ
ಕೊಂಡಿದೆ. ಶಿವಾನಂದ ವೃತ್ತದ ಬಳಿಯಿರುವ ಗಾಂಧಿಭವನದಲ್ಲಿ ಶನಿವಾರ (ಡಿ.9
ಪಾರ್ಥಸಾರಥಿ ಗ್ರಂಥ ಬಿಡುಗಡೆ ಮಾಡಲಿದ್ದಾರೆ. ಸಾಹಿತಿ ಡಾ.ಕವಿತಾ ಕೃಷ್ಣ ಕಾರ್ಯ
ಡಾ. ಎಂ.ಎ. ಜಯರಾಮ್ ರಾವ್, ಮಾಧ್ಯಮ ಅಕಾಡೆಮಿ ಸದಸ್ಯ ಎಚ್.ಬಿ. ಮದ
ಒಳಗೊಂಡಂತೆ ವೇದ, ಭಗವದ್ಗೀತೆ ಮತ್ತು ದಾಸರ ಪದಗಳ ಸಾರವೂ ಸೇರಿದೆ.

# ಅಪ್ಪನ ಕವಿತೆಯ ಕಾಶ್ಮೀರವೇ ಅದ್ಭುತ

## ಸಾಹಿತಿ ಕಾವ್ಯಾನಂದರ ಪುತ್ರಿ ವಿಜಯಾ ನಂದೀಶ್ವರ್ ಅಭಿಮತ » ಕವಿದನಿ ಕಾರ್ಯಕ್ರಮ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

'ಕಾಲಿಡಲು ಕೂಡ ಸ್ಥಳವಿಲ್ಲದಂತೆ ನೆಲವೆಲ್ಲ ಹೂಗಳಾಗಿ, ಕೈಯಿಡಲು ಕೂಡ ಸ್ಥಳವಿಲ್ಲದಂತೆ ಎಲೆಯೆಲ್ಲ ಹಣ್ಣಳಾಗಿ, ಆಕಾಶ ಕೂಡ ಕೈಯಾಸೆ ಮಾಡೆ ಮೇಲಿಂದ ಕೆಳಗೆ ಬಾಗಿ, ಕಾರ್ಗಾಲ ಬಂತು ಕಾಶ್ಮೀರಶ್ರೀಗೆ ಶ್ರೀಗಂಧ ಸ್ನಾನವಾಗಿ' ಹೀಗೆ ಅಪ್ಪ ಹಾಡುತ್ತಿದ್ದರೆ, ಒಮ್ಮೆ ಕಾಶ್ಮೀರಕ್ಕೆ ಹೋಗಿಬರಬೇಕು ಅನಿಸುತ್ತಿತ್ತು.

ಹೀಗೆ ಕಾವ್ಯಾನಂದ ಡಾ.ಸಿದ್ದಯ್ಯ ಪುರಾಣಿಕರನ್ನು ನೆನಪಿಸಿಕೊಂಡವರು ಪುತ್ರಿ ವಿಜಯಾ ನಂದೀಶ್ವರ್. ನಗರದ ಕನ್ನಡ ಭವನದ ನಯನ ಸಭಾಂಗಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಹೊಂಬಾಳೆ ಪ್ರತಿಭಾರಂಗ ವಚನಬ್ರಹ್ಮ, ಕಾವ್ಯಾನಂದ, ಮಕ್ಕಳ ಸಾಹಿತಿ ಡಾ. ಸಿದ್ದಯ್ಯ ಪುರಾಣಿಕರ ನೆನಪಿನ ಕವಿದನಿ ಕಾರ್ಯಕ್ರಮದಲ್ಲಿ ಮಾತನಾಡಿದರು.



ಹೊಂಬಾಳೆ ಪ್ರತಿಭಾರಂಗ ಆಯೋಜಿಸಿದ್ದ ಮಕ್ಕಳ ಸಾಹಿತಿ ಡಾ.ಸಿದ್ದಯ್ಯ ಪುರಾಣಿಕ ನೆನಪಿನ ಕವಿದನಿ ಕಾರ್ಯಕ್ರಮದಲ್ಲಿ ಪ್ರೊ. ಅ.ರಾ.ಮಿತ್ರ, ವಿಜಯಾ ನಂದೀಶ್ವರ್, ರುದ್ರೇಶ್ ಬಿ.ಅದರಂಗಿ ಮತ್ತಿತರರಿದ್ದರು.

» **ಕನ್ನಡ ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಹೊಂಬಾಳೆ ಪ್ರತಿಭಾರಂಗ ಆಯೋಜನೆ**

ನಾವು ಹೈದರಾಬಾದ್‌ನಲ್ಲಿದ್ದ ಸಂದರ್ಭದಲ್ಲಿ ಅಲ್ಲಿನ ಕೃಷಿ ಸಚಿವ. ಚೆನ್ನಾರೆಡ್ಡಿಯವರ ಜತೆ ಒಮ್ಮೆ ಅಪ್ಪ ಕಾಶ್ಮೀರಕ್ಕೆ ಹೋಗಿದ್ದರು. ಪ್ರವಾಸದಿಂದ ವಾಪಸ್ ಬಂದ ನಂತರ ಈ ಕವಿತೆಯನ್ನು ಬರೆದಿದ್ದರು. ಅದನ್ನು ಕೇಳಿ ಒಮ್ಮೆ ಕಾಶ್ಮೀರಕ್ಕೆ ಹೋಗಿ ಬರಬೇಕೆನಿಸುತ್ತಿತ್ತು. ಆಗ ಸಾಧ್ಯವಾಗಿರಲಿಲ್ಲ. ಇತ್ತೀಚೆಗೆ ಅಲ್ಲಿಗೆ ಹೋಗಿಬಂದ ನಂತರ ನನಗೆ, ಕವಿತೆಯಲ್ಲಿ ಅಪ್ಪ ವಿವರಿಸಿದ ಕಾಶ್ಮೀರಕ್ಕೂ ಪ್ರಸ್ತುತ ಕಾಶ್ಮೀರಕ್ಕೂ ಬಹಳ ವ್ಯತ್ಯಾಸ ಕಂಡಿತ್ತು. ರವಿ ಕಾಣದನ್ನು ಕವಿ ಕಂಡ ಎನ್ನುವುದು ಇದಕ್ಕೇ ಇರಬೇಕು ಎಂದು ವಿಜಯಾ ಹೇಳಿದರು.

**ಅಧಿಕಾರ ತ್ಯಾಗ!:** ಹೈದರಾಬಾದ್‌ನಲ್ಲಿ ಅಧಿಕಾರಿಯಾಗಿದ್ದ ಅಪ್ಪನಿಗೆ ಕರ್ನಾಟಕದಲ್ಲಿ ಸೇವೆ ಮಾಡಬೇಕು ಎನ್ನುವ ಹಂಬಲವಿತ್ತು. ಈ ಸಂದರ್ಭದಲ್ಲಿ ಕರ್ನಾಟಕಕ್ಕೆ ಹೋದರೆ ನಿಮ್ಮ ಸೇವಾ ಹಿರಿತನ ಕಡಿಮೆಯಾಗುತ್ತದೆ ಎಂದು ಚೆನ್ನಾರೆಡ್ಡಿ ಹೇಳಿದರು. ಇಲ್ಲೇ ಇದ್ದರೆ ನೀವು ಮುಖ್ಯ ಕಾರ್ಯದರ್ಶಿಯಾಗಬಹುದು ಎಂದಿದ್ದರು. ಆದರೆ, ಕರ್ನಾಟಕಕ್ಕೆ ಬರುವ ಹಂಬಲ ವ್ಯಕ್ತಪಡಿಸಿದ ಅಪ್ಪ, ಸೇವಾ ಹಿರಿತನ ತ್ಯಜಿಸಿ ಇಲ್ಲಿಗೆ ಬಂದರು. ಇದಕ್ಕೆ ಬೇಸರಪಟ್ಟುಕೊಳ್ಳದೆ ಕನ್ನಡ ನೆಲದಲ್ಲಿ ಇರುವುದಕ್ಕೆ ಸಂತೋಷಪಟ್ಟರು ಎಂದು ನೆನಪಿಸಿಕೊಂಡರು.

ಬೆಂಗಳೂರಿನಲ್ಲಿದ್ದಾಗಲೂ ಹಿರಿಯ ಸಾಹಿತಿಗಳ ಜತೆಗಿದ್ದ ಸಿದ್ದಯ್ಯ ಪುರಾಣಿಕ ಅವರ ಒಡನಾಟವನ್ನು ವಿಜಯಾ ಸ್ಮರಿಸಿಕೊಂಡರು. ಸರ್ಕಾರಿ ಕಲಾ ಕಾಲೇಜಿನ ಕನ್ನಡ ಉಪನ್ಯಾಸಕ ರುದ್ರೇಶ್ ಬಿ.ಅದರಂಗಿ, 'ಅಜ್ಜನ ಕೋಲಿದು ನನ್ನಯ ಕುದುರೆ' ಕವಿತೆ ಓದಿ, ಶಾಲೆಗಳ ಪಠ್ಯಕ್ರಮದಲ್ಲಿ ಶಿಶುಗೀತೆಗಳು ಕಡಿಮೆಯಾಗುತ್ತಿರುವುದಕ್ಕೆ ಬೇಸರ ವ್ಯಕ್ತಪಡಿಸಿದರು.

### ಬಂಗಾರದ ಮನುಷ್ಯ

ಬಾಲ್ಯದಲ್ಲಿ ಸಿದ್ದಯ್ಯಪುರಾಣಿಕ ಅವರಿಗೆ ಶಿಕ್ಷಕರು ನಿನಗೇನು ಬೇಕು ಎಂದು ಕೇಳಿದ್ದ ಸಂದರ್ಭದಲ್ಲಿ ವಿದ್ಯೆ ಬೇಕು ಎಂದು ಕೇಳಿಕೊಂಡರು. ಉರ್ದು ಮತ್ತು ಪಾರ್ಸಿಯಲ್ಲಿ ಪ್ರಾವೀಣ್ಯತೆ ಪಡೆದವರು ಸಿದ್ದಯ್ಯ ಪುರಾಣಿಕ. ಮೊದಲು ಮಾನವನಾಗು ಎಂದು ಅವರೇ ಬರೆದ ಕವಿತೆಯಂತೆ ಜೀವನ ಧ್ಯೇಯ ಇಟ್ಟುಕೊಂಡವರು ಅವರು. ಕನ್ನಡಕ್ಕಾಗಿ ಅಧಿಕಾರ ತ್ಯಾಗ, ಶುದ್ಧ ಚಾರಿತ್ರ್ಯ, ಅಧಿಕಾರಿಯಾಗಿದ್ದಾಗ ಜನರಿಗೆ ಮಾಡಿದ ಸಹಾಯ, ಸಾಹಿತ್ಯ ಸೇವೆಯಿಂದ ಅವರನ್ನು ಬಂಗಾರದ ಮನುಷ್ಯ ಎನ್ನಬಹುದು ಎಂದು ಸಾಹಿತಿ ಪ್ರೊ. ಅ.ರಾ.ಮಿತ್ರ ಹೇಳಿದರು. ಪಂಪನಿಂದ ಹಿಡಿದು ಹೊಸ ಕವಿಗಳ ಕವಿತೆಗಳನ್ನೂ ನಾನು ಓದಿದ್ದೇನೆ. ಕವಿತೆ ಓದು ಮನಸ್ಸಿಗೆ ಸಂತೋಷ ನೀಡುತ್ತದೆ. ಕವಿ ಬೇರೆಯವರಿಗಾಗಿ ಬರೆಯುವುದಿಲ್ಲ. ಬದಲಾಗಿ ತನಗಾಗಿ ಬರೆಯುತ್ತಾನೆ ಎಂದರು.

ಮಕ್ಕಳ ಸಾಹಿತ್ಯದಲ್ಲಿ ಸಿದ್ದಯ್ಯ ಪುರಾಣಿಕ್ ಕವಿತೆಗಳೇ ಎಂದಿಗೂ ನೆನಪಿನಲ್ಲಿ ಉಳಿಯುವಂತಹದು. ಸಿದ್ದಯ್ಯ ಪುರಾಣಿಕರು ಬರೆದ ಕರುಣೆಯೇ ಕಾಶಿ, ಏನಾದರೂ ಆಗು ಮೊದಲು ಮಾನವನಾಗು ಮುಂತಾದ ಕವಿತೆಯನ್ನು ದೇವೇಂದ್ರ ಪತ್ತಾರ್ ಹಾಡಿದರು. ಜಿ. ರಶ್ಮಿ ಗಮಕ ವಾಚಿಸಿದರು.

# 'ಕವಿದನಿ'ಯಲ್ಲಿ ಪುರಾಣಿಕರ ನೆನಪು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾಷೆಯ ಮೂಲಕವೇ ದೇಶಕ್ಕೆ ಕೀರ್ತಿ ತಂದುಕೊಟ್ಟವರು ನಮ್ಮ ಹಿರಿಯ ಸಾಹಿತಿಗಳು. ಅಂತವರ ಸಾಲಿನಲ್ಲಿ ಸಿದ್ಧಯ್ಯ ಪುರಾಣಿಕರು ಪ್ರಮುಖರು' ಎಂದು ವಿದ್ವಾಂಸ ಪ್ರೊ. ಅ.ರಾ. ಮಿತ್ರ ಹೇಳಿದರು.

ಹೊಂಬಾಳೆ ಪ್ರತಿಭಾರಂಗ ಸಂಸ್ಥೆಯು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಭಾನುವಾರ ನಡೆದ 'ಕವಿದನಿ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಅವರು ಓದಿದ್ದು ಉರ್ದು ಭಾಷೆಯಲ್ಲಾದರೂ, ಕನ್ನಡದಲ್ಲಿ ಉತ್ಕೃಷ್ಟ ಸಾಹಿತ್ಯ ರಚಿಸಿದ್ದಾರೆ. ಬಂಗಾರದಂತಹ ವ್ಯಕ್ತಿತ್ವ ಹೊಂದಿದ್ದ ಪುರಾಣಿಕರನ್ನು ಬಂಗಾರದ ಮನುಷ್ಯ ಎಂದು ಕರೆಯಲು ಇಚ್ಛಿಸುತ್ತೇನೆ'




ಡಾ. ಸಿದ್ಧಯ್ಯ ಪುರಾಣಿಕರ ಕವಿತೆಯನ್ನು ರಶ್ಮಿ ಜೆ. ಅವರು ಗಮಕ ರೂಪದಲ್ಲಿ ಪ್ರಸ್ತುತಪಡಿಸಿದರು. ಚಿತ್ರದಲ್ಲಿ (ಎಡದಿಂದ) ರುದ್ರೇಶ್ ಬಿ.ಅದರಂಗಿ, ಸಂಸ್ಥೆಯ ಎಚ್. ಫಲ್ಗುಣ, ಅ.ರಾ.ಮಿತ್ರ, ಪುರಾಣಿಕರ ಮಗಳು ವಿಜಯಾ ನಂದೀಶ್ವರ್ ಹಾಗೂ ಗಾಯಕ ದೇವೇಂದ್ರ ಕುಮಾರ್ ಪತ್ತಾರ್ ಇದ್ದಾರೆ –ಪ್ರಜಾವಾಣಿ ಚಿತ್ರ

ಬಿ.ಅದರಂಗಿ ಅವರು 'ಅಜ್ಜನ ಕೋಲಿದು ನನ್ನಯ ಕುದುರೆ' ಮತ್ತು 'ವಚನೋ-ದ್ಯಾನ'ದ ಕೆಲವು ವಚನಗಳನ್ನು

ಕಾಶಿ, ದಯೆಯೇ ಗಯೆ', 'ಸುತ್ತಿರುವ ಸದ್ದಿನಲಿ ಸುತ್ತಲಿನ ಗದ್ದಲಲಿ' ಸೇರಿದಂತೆ ಹಲವು ಕವಿತೆಗಳನ್ನು ಹಾಡಿದರು.

ಬಹುಜನ ಕನ್ನಡಿಗರು

# ಡಾ. ಸಿದ್ದಯ್ಯ ಪುರಾಣಿಕ ಜನ್ಮ ಶತಮಾನೋತ್ಸವಾಚರಣೆ

ಕಾವ್ಯ ರಚನೆಯಲ್ಲಿ ತೊಡಗಿಸಿಕೊಳ್ಳುವ ವ್ಯಕ್ತಿಗೆ ಸಮಾಜ ಕುರಿತ ತುಡಿತವಿರಬೇಕು. ಇದರಿಂದ ಸಮಾಜದ ಓರೆಕೋರೆಗಳನ್ನು ತಿದ್ದಲು ಸಾಧ್ಯ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ. ಎಸ್.ಜಿ. ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟು ಬೆಂಗಳೂರಿನ ಸರ್ಕಾರಿ ಕಲಾ ಕಾಲೇಜಿನ ಕನ್ನಡ ಸಂಘದ ಸಹಯೋಗದಲ್ಲಿ ಡಾ. ಸಿದ್ದಯ್ಯ ಪುರಾಣಿಕ ಜನ್ಮ ಶತಮಾನೋತ್ಸವದ ಹಿನ್ನೆಲೆಯಲ್ಲಿ ಮಾ.೨೨ರಂದು ಆಯೋಜಿಸಿದ್ದ ಸ್ವರಚಿತ ಕವನ ವಾಚನ ಸ್ಪರ್ಧೆಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಕಾವ್ಯಕ್ಕೆ ಅಸಾಧಾರಣ ಶಕ್ತಿ ಇದ್ದು ವ್ಯಕ್ತಿಯ ಮನಸ್ಸಿನ ಕೊಳೆ ಗುಡಿಸುವ ಪೊರಕೆಯಂತೆಯೂ ಕಾರ್ಯ ನಿರ್ವಹಿಸುತ್ತದೆ ಎಂದರು. ಕಾವ್ಯವು ಸೃಜನಾತ್ಮಕವಾಗಿದ್ದು, ಅದರಲ್ಲಿ ಕವಿಯು ಇದ್ದ ಜಾಗದ ಸುತ್ತಲಿನ ಪರಿಸರ ಹಾಗೂ ಕಾಲಘಟ್ಟವೂ ಸಹ ಸಮ್ಮಿಳಿತಯಿಂದ ಕೂಡಿರುತ್ತದೆ ಎಂದು ಅವರೆಂದರು.




ಡಾ. ಸಿದ್ದಯ್ಯಪುರಾಣಿಕ ಜನ್ಮ ಶತಮಾನೋತ್ಸವ ನೆನಪಿನ ಸ್ವರಚಿತ ಕವನ ವಾಚನ ಸ್ಪರ್ಧೆ ಕಾರ್ಯಕ್ರಮದ ಚಿತ್ರ. ಪ್ರೊ. ಎಸ್.ಜಿ. ಸಿದ್ದರಾಮಯ್ಯ, ಪ್ರೊ. ಅ.ರಾ.ಮಿತ್ರ, ವಿಜಯಾ ನಂದೀಶ್ವರ, ಪ್ರೊ. ವೆಂಕಟಶಾಮಿರೆಡ್ಡಿ ಮೊದಲಾದವರಿದ್ದಾರೆ.

ಪ್ರೊ. ಅ.ರಾ.ಮಿತ್ರ ಮಾತನಾಡಿ ಯುವ ಕವಿಗಳು ಸಮಾಜಮುಖಿ ಚಿಂತನೆಯಿಂದ ಕೂಡಿದ ಕಾವ್ಯ ರಚನೆಯತ್ತ ಲಕ್ಷ್ಯವಹಿಸಬೇಕು ಎಂದು ಕರೆ ನೀಡಿದರು. ಹಿರಿಯ ವಿದ್ವಾಂಸ ಪ್ರೊ.ಎಂ.ಎಚ್. ಕೃಷ್ಣಯ್ಯ, ಟ್ರಸ್ಟ್ ಅಧ್ಯಕ್ಷೆ ವಿಜಯಾ ನಂದೀಶ್ವರ್, ಕಾಲೇಜು ಪ್ರಾಂಶುಪಾಲ ಪ್ರೊ. ಕೆ.ಎಂ.ವೆಂಕಟಶಾಮಿರೆಡ್ಡಿ, ಕನ್ನಡ ಪ್ರಾಧ್ಯಾಪಕ ಪ್ರೊ. ರುದ್ರೇಶ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಈ ಕವನ ವಾಚನ ಸ್ಪರ್ಧೆಯಲ್ಲಿ ರಾಜ್ಯದ ವಿವಿಧೆಡೆಯಿಂದ ಸರ್ಕಾರೀ ಹಾಗೂ ಖಾಸಗಿ ಕಾಲೇಜುಗಳ ೬೦ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಸ್ನಾತಕ ಹಾಗೂ ಸ್ನಾತಕೋತ್ತರ ವಿಭಾಗದಲ್ಲಿ ಮೊದಲ ಮೂರು ಸ್ಥಾನ ಪಡೆದವರಿಗೆ ಅನುಕ್ರಮವಾಗಿ ರೂ.೫,೦೦೦/-ರೂ.೩,೦೦೦/- ಹಾಗೂ ರೂ.೨೦೦೦/- ಮೊತ್ತದ ಬಹುಮಾನಗಳನು ವಿತರಿಸಲಾಯಿತು.

# ಸದಾಶಿವ ನಗರ ವೀರಶೈವ ಸಮಾಜ : ವಿವಿಧ ದತ್ತಿಗಳ ಆಶ್ರಯದಲ್ಲಿ "ಸಿದ್ಧಯ್ಯ ಪುರಾಣಿಕರ ಜನ್ಮ ಶತಮಾನೋತ್ಸವ"

ಸದಾಶಿವ ನಗರ ವೀರಶೈವ ಸಮಾಜದ 205ನೇ ಮಾಸಿಕ ಸಮಾವೇಶವನ್ನು "ಏನಾದರೂ, ಆಗು ಮೊದಲು ಮಾನವನಾಗು" ಎಂದು ಬೋಧಿಸಿದ "ಮಹಾನ್ ಕವಿ ಸಿದ್ಧಯ್ಯ ಪುರಾಣಿಕರ ಜನ್ಮ ಶತಮಾನೋತ್ಸವ" ಕಾರ್ಯಕ್ರಮವನ್ನಾಗಿ ಆಚರಿಸಲಾಯಿತು. ಶ್ರೀಮತಿ ಚೆನ್ನಮ್ಮ ಗಂಗಪ್ಪಾರಾಧ್ಯ, ಶರಣೆ ಕೆ.ಪಿ.ಪಾರ್ವತಿ ಮತ್ತು ಜಿ.ಎಸ್.ಬಸವರಾಜ್ ಶರಣೆ ಶಾಂತ, ಡಾ॥ ಇ.ಎಸ್.ಗುರುಶಾಂತಪ್ಪ ಮತ್ತು ಎಸ್.ಎಂ.ಶಿವ ಶರಣ ಅವರುಗಳ ಸ್ಮರಣಾರ್ಥ ದತ್ತಿಗಳ ಆಶ್ರಯದಲ್ಲಿ ನಡೆದ ಈ ಕಾರ್ಯಕ್ರಮವನ್ನು ಕಾರ್ಯದರ್ಶಿ ಕು.ಪೂರ್ಣಿಮ ಮಲ್ಲೇಶ್ ನಿರೂಪಿಸಿದರು. ಜಿ.ವಿ.ರೇಣುಕ, ಇಂದಿರಾ ಶಾಂತಕುಮಾರ್, ಲತಾ ಪುರಾಣಿಕ (ಸಿದ್ಧಯ್ಯ ಪುರಾಣಿಕರ ಸೊಸೆ) ಮತ್ತಿತರರಿದ್ದ ಸುರುಚಿ ತಂಡ ಸಿದ್ಧಯ್ಯ ಪುರಾಣಿಕರ ಗೀತೆಗಳನ್ನು ಸೊಗಸಾಗಿ ಹಾಡುವುದರೊಂದಿಗೆ ಆರಂಭವಾಯಿತು. ಸಮಾಜದ ಖಜಾಂಚಿ ಹಾಗೂ ದತ್ತಿದಾನಿ ಅರುಣಾ ಶಿವಶರಣ್ ಸ್ವಾಗತಿಸಿದರು.

ಸಿದ್ಧಯ್ಯ ಪುರಾಣಿಕರ ಬದುಕು ಮತ್ತು ಬರಹದ ಕುರಿತು ಮಾತನಾಡಿದ ಕನ್ನಡ ಸಹಾಯಕ ಪ್ರಾಧ್ಯಾಪಕ ರುದ್ರೇಶ್ ಬಿ.ಅದರಂಗಿ "ಪುರಾಣಿಕರು ರಚಿಸಿದ ಏನಾದರೂ ಆಗು ಮೊದಲು ಮಾನವನಾಗು ಗೀತೆ ಕುವೆಂಪು ಅವರ ಅನಿಕೇತನ ಗೀತೆಯಷ್ಟೇ ಪ್ರಸಿದ್ಧಿಯಾಗಿದೆ. ಐ.ಎ.ಎಸ್. ಅಧಿಕಾರಿಯಾಗಿ ಸರ್ಕಾರದಲ್ಲಿ ಸೇವೆ ಸಲ್ಲಿಸಿ, ಎಲ್ಲಾ ಕಡೆಯೂ ಒಳ್ಳೆಯ ಹೆಸರು ಸಂಪಾದಿಸಿದ್ದ ಅವರು ಸಾಹಿತಿಯಾಗಿಯೂ ದೊಡ್ಡ ಸಾಧನೆ ಮಾಡಿದರು, ಸಾಹಿತ್ಯ ಪರಿಷತ್ತಿನ ನಿಘಂಟು ಪ್ರಕಟಣೆಯಲ್ಲಿ ಪ್ರಮುಖ ಪಾತ್ರ ವಹಿಸಿದರು, ಗುಲ್ಬರ್ಗದಲ್ಲಿ ನಡೆದ 58ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು, ಕರ್ನಾಟಕ ವಿಕಾಸ ವೇದಿಕೆ ಸ್ಥಾಪಿಸಿ, ಎಚ್.ಡಿ.ದೇವೇಗೌಡರಿಗೆ ಪುನರ್ಜನ್ಮ ನೀಡಿದರು, ತಿಳಿಸಿದರಲ್ಲದೆ, ಪುರಾಣಿಕರು ರಚಿಸಿದ "ಬೆಲೆ ಪಟ್ಟ" ಹಾಗೂ "ವಿದ್ಯೆ ಬಂತು ವಿನಯ ಹೋಯ್ತು" ಮೊದಲಾದ ಕವನಗಳನ್ನು ವಾಚಿಸಿದರು. ತಾವು ಪುರಾಣಿಕರ ಕೊನೆಯ ದಿನಗಳಲ್ಲಿ ಅವರ ಆತ್ಮೀಯ ಒಡನಾಡಿಯಾಗಿ ದ್ದುದನ್ನು ಸ್ಮರಿಸಿಕೊಂಡರು.

ಮುಖ್ಯ ಅತಿಥಿಯಾಗಿದ್ದ ಪ್ರಸನ್ನಕುಮಾರ್ ಪುರಾಣಿಕ (ಸಿದ್ಧಯ್ಯ ಪುರಾಣಿಕರ ಪುತ್ರ) "ಸಮಯ ಸಿಕ್ಕಾಗಲೆಲ್ಲಾ ವಿಶ್ವದ ಉತ್ತಮ ಸಾಹಿತ್ಯ ಕೃತಿಗಳನ್ನು ಓದುತ್ತಿದ್ದ ನಮ್ಮ ತಂದೆಯವರು 60 ಶ್ರೇಷ್ಠ ಕೃತಿಗಳನ್ನು ರಚಿಸಿದ್ದಾರೆ" ಎಂದು



ಪ್ರಸನ್ನಕುಮಾರ್ ಪುರಾಣಿಕ ಮತ್ತು ವಿಜಯಾ ನಂದೀಶ್ವರ ಅವರಿಗೆ ಗೌರವಾರ್ಪಣೆ. ಎಸ್.ಷಡಕ್ಷರಿ, ರುದ್ರೇಶ್ ಅದರಂಗಿ, ಲತಾ ಪುರಾಣಿಕ್, ಅರುಣ್ ಶಿವಶರಣ್ ಮೊದಲಾದವರಿದ್ದಾರೆ.

ಇವರ ಇಬ್ಬರು ಸಹೋದರರು ಅನ್ನದಾನಯ್ಯ ಪುರಾಣಿಕ ಮತ್ತು ಬಸವರಾಜ ಪುರಾಣಿಕರೂ ದೊಡ್ಡ ಕವಿಗಳು, ವಚನೋದ್ಯಾನ ಮೊದಲಾದ ಸಂಕಲನಗಳ ಮೂಲಕ ಸ್ವತಂತ್ರಧೀರ ಸಿದ್ಧೇಶ್ವರ ಅಂಕಿತದಿಂದ ಆಧುನಿಕ ವಚನಗಳಿಗೆ ಘನತೆ ತಂದು ಕೊಟ್ಟರು. ಕಥೆ, ಕಾದಂಬರಿ, ಮಕ್ಕಳ ಸಾಹಿತ್ಯ ಹೀಗೆ ಎಲ್ಲಾ ಪ್ರಾಕಾರಗಳಲ್ಲಿ ಕೈಯಾಡಿಸಿದ ಪುರಾಣಿಕರು, ಶರಣರ ಬಗೆಗೆ ವಸ್ತುನಿಷ್ಠ ಅಧ್ಯಯನ ನಡೆಸಿ ಶರಣ ಚರಿತಾಮೃತ ಗ್ರಂಥ ರಚಿಸಿದ್ದಾರೆ. ಪ್ರಕೃತಿಯಲ್ಲೇ ದೇವರನ್ನು ಕಂಡಿದ್ದಾರೆ. ಭ್ರಷ್ಟ ರಾಜಕಾರಣಿಗಳನ್ನು ಲೇವಡಿ ಮಾಡಿ ಕವನಗಳನು ರಚಿಸಿದ್ದಾರೆ" ಎಂದು ಹೇಳಿದರು.

ಸಮಾರಂಭದ ಅಂಗವಾಗಿ ನಡೆದ ಕವಿಗೋಷ್ಠಿಯಲ್ಲಿ ಶೈಲಾ ದೇವರಾಜ್, ಪೂರ್ಣಿಮ ಮಲ್ಲೇಶ್ ಮತ್ತು ಜಿ.ವಿ.ರೇಣುಕ ಭಾಗವಹಿಸಿ ಸ್ವರಚಿತ ಕವನಗಳನ್ನು ವಾಚಿಸಿದರು.

ಅಧ್ಯಕ್ಷತ ವಹಿಸಿದ್ದ ಸಮಾಜದ ಅಧ್ಯಕ್ಷ ಖ್ಯಾತ ಹಾಸ್ಯ ಸಾಹಿತಿ ಅಂಕಣಕಾರ ಎಸ್.ಷಡಕ್ಷರಿ ಬಹಳ ಚೆನ್ನಾಗಿ ಸಿದ್ಧಯ್ಯ ಪುರಾಣಿಕರ ಬಗೆಗೆ ಉಪನ್ಯಾಸ ನೀಡಿದ ರುದ್ರೇಶ್ ಅದರಂಗಿ ಅವರನ್ನು ಅಭಿನಂದಿಸಿದರು. "ತುಪ್ಪ ಬಿಟ್ಟವರುಂಟು, ಉಪ್ಪು ಬಿಟ್ಟವರುಂಟು, ತಪ್ಪು ಬಿಟ್ಟವರುಂಟೇ?" - ಮೊದಲಾದ ಸಿದ್ಧಯ್ಯ ಪುರಾಣಿಕರ ಕವನಗಳನ್ನು ಉಲ್ಲೇಖಿಸಿ, ಈ ಮಹಾನ್ ಸಾಹಿತಿಗೆ ಇನ್ನೂ ದೊಡ್ಡ ದೊಡ್ಡ ಗೌರವಗಳು ಲಭಿಸಬೇಕಾಗಿತ್ತು ಎಂದು ಅಭಿಪ್ರಾಯಪಟ್ಟರು.

ಸಿದ್ಧಯ್ಯ ಪುರಾಣಿಕರ ಮಕ್ಕಳಾದ ವಿಜಯಾ ನಂದೀಶ್ವರ, ಭಾರತಿ ಮೃತ್ಯುಂಜಯ, ಸಾಹಿತಿ, ಪತ್ರಕರ್ತ ಬಿ.ಎಸ್.ಜಯಪ್ರಕಾಶ್, ಸಮಾಜದ ಸಹ ಕಾರ್ಯದರ್ಶಿ ಎಸ್.ಶಿವಶಂಕರ್, ದತ್ತಿಸಾನಿ ಕೆ.ಎಸ್.ದಿನೇಶ್ ಮೊದಲಾದವರು ಉಪಸ್ಥಿತರಿದ್ದರು.

15.9.2018

Kendra Sahitya Academy Bagalkot

**ವಿಚಾರ ಸಂಕಿರಣ** ಸಾಹಿತಿ ಸಿದ್ದಯ್ಯ ಪುರಾಣಿಕ ಜನ್ಮ ಶತಮಾನೋತ್ಸವ ಅಂಗವಾಗಿ ವಿಚಾರ ಸಂಕಿರಣ

# ರಾಜಕಾರಣಿಗಳಿಂದ ಕನ್ನಡ ಕಡೆಗಣನೆ

• **ಕನ್ನಡಪ್ರಭ ವಾರ್ತೆ** ಬಾಗಲಕೋಟೆ

ಕನ್ನಡ ಭಾಷೆ ಬಗ್ಗೆ ರಾಜಕಾರಣಿಗಳು ಅಸಡ್ಡೆ ತೋರುತ್ತಿದ್ದಾರೆ ಎಂದು ಹಿರಿಯ ಸಾಹಿತಿ ಸಿದ್ದಲಿಂಗಯ್ಯ ಹೇಳಿದರು.

ನಗರದ ಬಿವಿವಿ ಸಂಘದ ಬಸವೇಶ್ವರ ಕಲಾ ಮಹಾವಿದ್ಯಾಲಯದ ಸಭಾಭವನದಲ್ಲಿ ಶನಿವಾರ ಸಾಹಿತಿ ಸಿದ್ದಯ್ಯ ಪುರಾಣಿಕ ಜನ್ಮ ಶತಮಾನೋತ್ಸವ ಅಂಗವಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಸಿದ್ದಯ್ಯ ಪುರಾಣಿಕರ ಬದುಕು ಬರಹ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಮಂತ್ರಿ ಮಹೋದಯರು, ಅಧಿಕಾರಿಗಳು ಆಡಳಿತ ಭಾಷೆಯಾಗಿ ಕನ್ನಡ ಬಳಕೆ ಮಾಡುತ್ತಿಲ್ಲ. ಕಡತಗಳನ್ನು ಸಹ ಇಂಗ್ಲಿಷ್‌ನಲ್ಲಿ ಬಳಸುತ್ತಿದ್ದಾರೆ. ಕನ್ನಡದ ಬಗ್ಗೆ ಕಳಕಳಿ ಹೊಂದಿ, ಆಡಳಿತದಲ್ಲಿ ಕನ್ನಡ ಬಳಕೆ ಮಾಡಬೇಕು ಎಂದರು

ಹೈದ್ರಾಬಾದ್ ಕರ್ನಾಟಕ ಭಾಗದ ರಾಯಚೂರ ಮೂಲದ ಸಿದ್ದಯ್ಯ ಪುರಾಣಿಕರು ಕನ್ನಡ ಪ್ರೀತಿ ನಮ್ಮೆಲ್ಲರಿಗೂ ಮಾದರಿಯಾಗಿದೆ. ಉರ್ದು, ಇಂಗ್ಲಿಷ್ ಭಾಷೆಯಲ್ಲಿ ಶಿಕ್ಷಣ ಪಡೆದು ಮಾಮಲೆದಾರರಾಗಿ, ಸ್ವಾತಂತ್ರ್ಯ ಭಾರತ ಐಎಎಸ್ ಅಧಿಕಾರಿಯಾಗಿ ಸೇವೆ ಸಲ್ಲಿಸಿದರು. ಕನ್ನಡ ಭಾಷೆಗೆ ತಮ್ಮದೆ ಆದ ವಿಶೇಷ ಕೊಡುಗೆ ನೀಡಿದ್ದಾರೆ ಎಂದು ಅವರು ತಿಳಿಸಿದರು.

ಸಿದ್ದಯ್ಯ ಪುರಾಣಿಕರ ಮೇಲೆ ಮಾರ್ಕ್ಸ್ ಪ್ರಭಾವ ಆಗಿತ್ತು ಎನಿಸುತ್ತದೆ. ಅವರ ಸಾಹಿತ್ಯ ರಚನೆಯಲ್ಲಿ ಸಮನ್ವಯತೆ ಎದ್ದು ಕಾಣುತ್ತದೆ. ತುರ್ತು ಪರಿಸ್ಥಿತಿಯನ್ನು ಧೈರ್ಯದಿಂದ ವಿರೋಧಿಸಿದ್ದರು. ಜೀವನಕ್ಕೆ ವಿಶೇಷ ನೀತಿ ರೂಪಿಸಿದ್ದರು. ಜಾತಿ, ಧರ್ಮ, ಅಧಿಕಾರದ ಪ್ರಭಾವಕ್ಕೆ ಒಳಗಾಗದೇ ಮಾನವೀಯತೆ ನೆಲೆಗಟ್ಟಿನಲ್ಲಿ ಬದುಕಬೇಕು ಎಂದು ಅವರ ಒತ್ತಾಸೆ ಆಗಿತ್ತು. ಬಡವರ ಪರ ನಿಲುವನ್ನು ಹೊಂದಿದ್ದರು ಎಂದರು.



ಬಾಗಲಕೋಟೆ ನಗರದ ಬಿವಿವಿ ಸಂಘದ ಬಸವೇಶ್ವರ ಕಲಾ ಮಹಾವಿದ್ಯಾಲಯದ ಸಭಾಭವನದಲ್ಲಿ ನಡೆದ ಸಿದ್ದಯ್ಯ ಪುರಾಣಿಕರ ಬದುಕು ಬರಹ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಖ್ಯಾತ ಸಾಹಿತಿ ಸಿದ್ದಲಿಂಗಯ್ಯ ಉದ್ಘಾಟಿಸಿದರು.

ಆ ಕಾಲದಲ್ಲಿ ಕುವೆಂಪು, ಬೇಂದ್ರೆ ಅವರಂತಹ ಆಲದ ಮರದ ನೆರಳಿನಲ್ಲಿ ಪುರಾಣಿಕರಿಗೆ ಅಷ್ಟೊಂದು ಪ್ರಚಾರ ಸಿಗಲಿಲ್ಲ. ಆದರೇ ಅವರು ರಚಿಸಿದ ಹೊತ್ತಿತ್ತೋ.. ಹೊತ್ತಿತೋ.. ಕನ್ನಡದ ದೀಪ ಕವಿತೆ ಇಂದಿಗೂ ಪ್ರಸಿದ್ಧವಾಗಿದೆ. ಆಸಕ್ತಿ ದಾಯಕ ಕವನ ರಚನೆ ಮಾಡಿದ್ದಾರೆ ಎಂದು ಅವರು ತಿಳಿಸಿದರು.

ಬಿವಿವಿ ಸಂಘದ ಕಾರ್ಯಾಧ್ಯಕ್ಷ, ಶಾಸಕ ವೀರಣ್ಣ ಚರಂತಿಮಠ ಮಾತನಾಡಿ, ಸಿದ್ದಲಿಂಗಯ್ಯ ಬಂಡಾಯ ಸಾಹಿತಿ ಆಗಿದ್ದರೂ ಸಮಾಜದಲ್ಲಿ ಸಂಘರ್ಷ, ಕಲಹಕ್ಕೆ ದಾರಿ ಕೊಟ್ಟವರಲ್ಲ, ತಮ್ಮದೇ ಆದ ವಿಚಾರಧಾರೆಯೊಂದಿಗೆ ಗುರುತಿಸಿಕೊಂಡವರು ಎಂದು ಹೇಳಿದರು.

ಬಂಡಾಯ ಸಾಹಿತಿಗಳು, ಪ್ರಗತಿಪರ ಚಿಂತಕರು ಸಾಹಿತಿ ಸಿದ್ದಲಿಂಗಯ್ಯ ಅವರನ್ನು ಅನುಕರಣೆ ಮಾಡಬೇಕು. ಇಂತವರಿಂದ ಯಾವುದೇ ಸಮಸ್ಯೆಗಳು ಉದ್ಭವಿಸುವುದಿಲ್ಲ ಎಂದು ಅವರು ತಿಳಿಸಿದರು.

ಸಾಹಿತಿ ಅಕಾಡಮಿ ಪ್ರಾಧಾನ ಕಾರ್ಯದರ್ಶಿ ಎಸ್.ಪಿ.ಮಹಾಲಿಂಗೇಶ್ವರ, ಸಲಹಾ ಸಮಿತಿ ಸದಸ್ಯರಾದ ಡಾ.ಬಾಳಾಸಾಹೇಬ ಲೋಕಾಪುರ, ಸಿದ್ದಯ್ಯ ಪುರಾಣಿಕ ಅವರ ಪುತ್ರ ಪ್ರಸನ್ನಕುಮಾರ, ಡಾ.ಕೆ.ಪ್ರಹ್ಲಾದ, ಬಿವಿವಿ ಸಂಘದ ಕಾಲೇಜು ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಸಜ್ಜನ ಬೇವೂರ, ಪ್ರಾಚಾರ್ಯ ಡಾ.ವಿ.ಎಸ್.ಕಟಗಿಹಳ್ಳಿಮಠ ಇತರರು ಇದ್ದರು.


ಕನ್ನಡಪ್ರಭ

ಭಾನುವಾರ 16.9.2018